(4) The Committee shall receive complaints or applications or claim from the victims on account of the health hazard caused by the stone crushers within a period of three months from the date the health hazard has occurred and consider such applications and determine the amount of relief to be granted to each of the applicant within a period of three months from the date of receipt of the application in accordance with the rules as may be prescribed:

Provided that the Committee may entertain such complaints or applications after the expiry of three months if it is satisfied that the complainant or applicant had sufficient cause for not submitting the complaint or application in time.

(5) The Committee may also direct the licence holder to pay such amount to such of the victims as determined under sub-section (4) in addition to the amount paid by it, within a period of two months from the date of the Order failing which the license shall be cancelled.

13. Accounts and Audit.- (1) The Accounts of all receipts and expenditure of the Victim Relief Fund shall be kept in such manner and in such form as may be prescribed.

(2) The accounts of the Victim Relief Fund shall be subject to audit annually by the State Accounts Department and the audit report shall be forwarded annually to the State Government.

14. Annual report.- The committee shall prepare for every year a report of its activities under this Act and submit the same to the State Government in such form on or before such date as may be prescribed and the State Government shall cause the same to be laid before each house of the legislature.

15. Appeals against the orders of the Licensing Authority.- (1) The Regional Commissioner of the concerned region shall be the Appellate Authority of respective jurisdiction to whom appeals in respect of the orders passed by the licensing authority shall lie.

(2) Every appeal shall be presented within thirty days from the date on which the order appealed against was communicated to the person affected:

Provided that an appeal may be admitted after the said period of thirty days, if the appellant show sufficient cause that the appeal could not be presented in time.

(3) Every appeal shall be in the form of memorandum setting forth concisely the grounds of objection to the order and shall be accompanied by a copy of the order appealed against.

(4) The appeal shall be disposed off on hearing both sides within a period of three months.

16. Penalties.- (1) Whoever contravenes the conditions of license shall be punished with imprisonment for a term which may extend to two years or with fine which may extend to twenty-five thousand rupees or with both.

(2) Any rule made under any provision of this Act may provide that any contravention thereof shall be punishable with imprisonment for a term which may extend to one year, or with fine which may extend to five thousand rupees or with both and in the case of continuing contravention, with an additional fine which may extend to five hundred rupees for every day during which such contravention continues after conviction for the first such contravention.

17. Cognizance of offences.- (1) No court shall take cognizance of an offence punishable under this Act or any rules made thereunder except upon complaint in writing made by a person authorized in this behalf by the Licensing Authority.

(2) No court other than the Court of Judicial Magistrate first class shall try any offence punishable under this Act.

18. Power to make rules.- (1) The State Government may, after previous publication by notification, make rules for carrying out the purposes of this Act.

(2) Every rule made under this Act, shall be laid as soon as may be after it is made before each House of the State Legislature while it is in session for a total period of thirty days which may be comprised in one session or in two successive sessions, and if before the expiry of the session in which it is so laid or the session immediately following both Houses agree in making any modification in the rule or both Houses agree that the rule should not be made the rule shall thereafter have effect only in such modified form or be of no effect, as the case may be, so however that any such modification or annulment shall be without prejudice to the validity of anything previously done under that rule.

19. Removal of difficulties.- If any difficulty arises in giving effect to the provision of this Act, the State Government may, by order published in the official Gazette as the occasion may require do anything which appears to it be necessary to remove the difficulty.

20. Repeal and savings.- (1) The Karnataka Regulation of Stone Crushers Ordinance, 2011 (Karnataka Ordinance No.2 of 2011) is hereby repealed.

(2) Notwithstanding such repeal anything done or any action taken under the said Ordinance shall be deemed to have been done or taken under this Act.

The above translation of ಕರ್ನಾಟಕ ಕಲ್ಲುಪುಡಿ ಮಾಡುವ ಘಟಕಗಳ (ಕ್ರಷರ್‌ಗಳ) ನಿಯಂತ್ರಣ ಅಧಿನಿಯಮ, 2011 (2012ರ ಕರ್ನಾಟಕ ಅಧಿನಿಯಮ ಸಂಖ್ಯೆ: 8) be published in the official Gazette under clause (3) of Article 348 of the Constitution of India.

H.R.BHARDWAJ

GOVERNOR OF KARNATAKA

By Order and in the name of the Governor of Karnataka,

G.K. BOREGOWDA

Secretary to Government,

Department of Parliamentary Affairs and Legislation

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಸೋಮವಾರ, ಫೆಬ್ರವರಿ ೧೩, ೨೦೧೨ (ಮಾಘ ೨೪, ಶಕ ವರ್ಷ ೧೯೩೩)	ನಂ. ೧೦೯

KARNATAKA ELECTRICITY REGULATORY COMMISSION

No. 9/2, 6th & 7th Floor, Mahalaxmi Chambers, M.G. Road, Bangalore-560 001

NOTIFICATION

No. Y/01/12, Bangalore, dated 1st February, 2012

In exercise of the powers conferred under Clause 7(c) of the KERC (Procurement of Energy from Renewable Sources) (First Amendment) Regulations, 2011, for the purpose of Renewable Energy Certificates (REC), the Karnataka Electricity Regulatory Commission hereby notifies the pooled cost of power purchase as Rs. 2.73/unit for the Financial year 2012.

Approved by the Commission

SECRETARY
Karnataka Electricity Regulatory Commission,
Bangalore

ವಿಶೇಷ ಪತ್ರಿಕೆ

ಭಾಗ – IV-A	ಬೆಂಗಳೂರು, ಮಂಗಳವಾರ, ಫೆಬ್ರವರಿ ೧೪, ೨೦೧೨ (ಮಾಘ ೨೫, ಶಕ ವರ್ಷ ೧೯೩೩)	ನಂ. ೧೧೦

HEALTH AND FAMILY WELFARE SECRETARIAT

NOTIFICATION

No. HFW 416 MPS 2011, Bangalore, Dated: 13th February, 2012

In exercise of the powers conferred by sub-section (2) of Section 1 of the Karnataka Medical Registration (Amendment) Act, 2003 (Karnataka Act 43 of 2003), the Government of Karnataka, hereby appoints the 1st day of March 2012 as the date on which all the provisions of the said Act, shall come into force.

By Order and in the name of the Governor of Karnataka,

V. SAIBABA
Under Secretary to Government,
Health and Family Welfare Department
(Medical Education)
22034293

ವಿಶೇಷ ಪತ್ರಿಕೆ

ಭಾಗ – III	ಬೆಂಗಳೂರು, ಮಂಗಳವಾರ, ಫೆಬ್ರವರಿ ೧೪, ೨೦೧೨ (ಮಾಘ ೨೫, ಶಕ ವರ್ಷ ೧೯೩೩)	ನಂ. ೧೧೧

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 9 ಹೆಚ್‌ಹೆಚ್‌ಎಲ್ 2012, ಬೆಂಗಳೂರು, ದಿನಾಂಕ: 14–02–2012

ಡಾ: ವಿ.ಎಸ್. ಆಚಾರ್ಯ, ಉನ್ನತ ಶಿಕ್ಷಣ, ಯೋಜನೆ ಮತ್ತು ಸಾಂಖ್ಯಿಕ, ಮುಜರಾಯಿ ಹಾಗೂ ಐಟಿ & ಬಿಟಿ ಸಚಿವರು ಇವರು ದಿನಾಂಕ: 14–02–2012 ರಂದು ನಿಧನರಾದ ವಿಷಯವನ್ನು ರಾಜ್ಯ ಸರ್ಕಾರವು ತೀವ್ರ ಸಂತಾಪದಿಂದ ಈ ಮೂಲಕ ಪ್ರಕಟಿಸಿದೆ.

ಎಸ್.ವಿ. ರಂಗನಾಥ್
ಸರ್ಕಾರದ ಮುಖ್ಯ ಕಾರ್ಯದರ್ಶಿ

PERSONNEL AND ADMINISTRATIVE REFORMS SECRETARIAT

NOTIFICATION

NO: DPAR 9 HHL 2012, BANGALORE DATED: 14-02-2012

THE GOVERNMENT OF KARNATAKA ANNOUNCE WITH MOST PROFOUND REGRET THE DEATH OF **DR. V.S. ACHARYA,** MINISTER FOR HIGHER EDUCATION; PLANNING; STATISTICS; MUZRAI AND IT & BT ON 14-02-2012

S.V. RANGANATH
CHIEF SECRETARY TO GOVERNMENT

ವಿಶೇಷ ಪತ್ರಿಕೆ

ಭಾಗ – **IV-A**	**ಬೆಂಗಳೂರು, ಮಂಗಳವಾರ, ಫೆಬ್ರವರಿ ೧೪, ೨೦೧೨ (ಮಾಘ ೨೫, ಶಕ ವರ್ಷ ೧೯೩೩)**	ನಂ. ೧೧೨

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 9 ಹೆಚ್‌ಹೆಚ್‌ಎಲ್ 2012, ಬೆಂಗಳೂರು, ದಿನಾಂಕ: 14–02–2012

ಕರ್ನಾಟಕ ರಾಜ್ಯದ ಹಾಲಿ ಉನ್ನತ ಶಿಕ್ಷಣ; ಯೋಜನೆ ಮತ್ತು ಸಾಂಖ್ಯಿಕ; ಮುಜರಾಯಿ ಮತ್ತು ಐಟಿ & ಬಿಟಿ ಸಚಿವರು ಇವರು ದಿನಾಂಕ: 14–02–2012ರ ಮಂಗಳವಾರದಂದು ಅಪರಾಹ್ನ 1–02 ಗಂಟೆಗೆ ನಿಧನರಾದ ವಿಷಯವನ್ನು ಕರ್ನಾಟಕ ರಾಜ್ಯ ಸರ್ಕಾರವು ತೀವ್ರ ಸಂತಾಪದಿಂದ ಈ ಮೂಲಕ ಪ್ರಕಟಿಸಿದೆ.

ಮುಂದುವರಿಸಿ, ದಿವಂಗತರ ಅಂತ್ಯಕ್ರಿಯೆಯನ್ನು ದಿನಾಂಕ: 14–02–2012ರಂದು ಮಂಗಳವಾರ ಸಂಜೆ ದಿವಂಗತರ ಹುಟ್ಟೂರಾದ ಉಡುಪಿ ಜಿಲ್ಲೆಯಲ್ಲಿ **ಸಕಲ ಸರ್ಕಾರಿ ಗೌರವಗಳೊಂದಿಗೆ** ನೆರವೇರಿಸಲಾಗುವುದು.

ದಿವಂಗತರ ಗೌರವಾರ್ಥವಾಗಿ **ದಿನಾಂಕ: 14–02–2012 ರಂದು ಮಂಗಳವಾರ ಬೆಂಗಳೂರು ನಗರ, ದಕ್ಷಿಣಕನ್ನಡ ಹಾಗೂ ಉಡುಪಿ ಜಿಲ್ಲೆಯಾದ್ಯಂತ ಸಾರ್ವಜನಿಕ ರಜೆಯನ್ನು ಘೋಷಿಸಲಾಗಿದ್ದು, ಬೆಂಗಳೂರು ನಗರ, ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳ ಎಲ್ಲಾ ಸರ್ಕಾರಿ ಕಛೇರಿಗಳನ್ನು ಮತ್ತು ಎಲ್ಲಾ ಶಾಲಾ ಕಾಲೇಜುಗಳನ್ನು** (ಅನುದಾನ ಪಡೆಯುವ ಎಲ್ಲಾ ವಿದ್ಯಾ ಸಂಸ್ಥೆಗಳೂ ಸೇರಿದಂತೆ) **ಮುಚ್ಚಲು ಆದೇಶಿಸಿದೆ** ಮತ್ತು ದಿನಾಂಕ: 14–02–2012 ರಿಂದ 16–02–2012 ರವರೆಗೆ (ಉಭಯ ದಿನಗಳು ಸೇರಿ) 3 ದಿನಗಳ ಶೋಕವನ್ನು ಆಚರಿಸಲಾಗುವುದು. ಈ ಅವಧಿಯಲ್ಲಿ ಯಾವುದೇ ಸಾರ್ವಜನಿಕ ಮನರಂಜನಾ ಕಾರ್ಯಕ್ರಮಗಳು ಇರುವುದಿಲ್ಲ. ರಾಜ್ಯ ಸರ್ಕಾರದ ಎಲ್ಲಾ ಕಟ್ಟಡಗಳ ಮೇಲೆ ರಾಷ್ಟ್ರಧ್ವಜವನ್ನು ಅರ್ಧ ಮಟ್ಟದಲ್ಲಿ ಹಾರಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪದ್ಮರಾಜು
ಸರ್ಕಾರದ ಅಧೀನ ಕಾರ್ಯದರ್ಶಿಗಳು,
ಸಿಆಸುಇ (ರಾಜ್ಯ ಶಿಷ್ಟಾಚಾರ)

ವಿಶೇಷ ಪತ್ರಿಕೆ

ಭಾಗ – **III**	**ಬೆಂಗಳೂರು, ಬುಧವಾರ, ಫೆಬ್ರವರಿ ೧೫, ೨೦೧೨ (ಮಾಘ ೨೬, ಶಕ ವರ್ಷ ೧೯೩೩)**	ನಂ. ೧೧೪

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ತಿದ್ದೋಲೆ

ಸಂಖ್ಯೆ: ಸಿಆಸುಇ 9 ಹೆಚ್‌ಹೆಚ್‌ಎಲ್ 2012, ಬೆಂಗಳೂರು, ದಿನಾಂಕ: 15–02–2012

ಅಧಿಸೂಚನೆ ಸಂಖ್ಯೆ: ಸಿಆಸುಇ 9 ಹೆಚ್‌ಹೆಚ್‌ಎಲ್ 2012, ದಿನಾಂಕ: 14–02–2012 ರ ಕಂಡಿಕೆ–1ರಲ್ಲಿ,

"ಕರ್ನಾಟಕ ರಾಜ್ಯದ ಹಾಲಿ ಉನ್ನತ ಶಿಕ್ಷಣ; ಯೋಜನೆ ಮತ್ತು ಸಾಂಖ್ಯಿಕ; ಮುಜರಾಯಿ ಮತ್ತು ಐಟಿ & ಬಿಟಿ ಸಚಿವರು ಇವರು"

ಎಂಬುದಕ್ಕೆ ಬದಲಾಗಿ ಈ ಕೆಳಗಿನಂತೆ ಓದಿಕೊಳ್ಳತಕ್ಕದ್ದು:–

"ಕರ್ನಾಟಕ ರಾಜ್ಯದ ಹಾಲಿ ಉನ್ನತ ಶಿಕ್ಷಣ; ಯೋಜನೆ ಮತ್ತು ಸಾಂಖ್ಯಿಕ; ಮುಜರಾಯಿ ಮತ್ತು ಐಟಿ & ಬಿಟಿ ಸಚಿವರಾದ ಡಾ: ವಿ.ಎಸ್. ಆಚಾರ್ಯ ಇವರು"

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪದ್ಮರಾಜು
ಸರ್ಕಾರದ ಅಧೀನ ಕಾರ್ಯದರ್ಶಿಗಳು,
ಸಿಆಸುಇ (ರಾಜ್ಯ ಶಿಷ್ಟಾಚಾರ)

ವಿಶೇಷ ಪತ್ರಿಕೆ

ಭಾಗ – **IV-A**	ಬೆಂಗಳೂರು, ಬುಧವಾರ, ಫೆಬ್ರವರಿ ೧೫, ೨೦೧೨ (ಮಾಘ ೨೬, ಶಕ ವರ್ಷ ೧೯೩೩)	ನಂ. ೧೧೫

ಆರ್ಥಿಕ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಎಫ್‌ಡಿ 4 ಎಸ್‌ಆರ್‌ಎ 2010, ಬೆಂಗಳೂರು, ದಿನಾಂಕ: 15.02.2012

ಕರ್ನಾಟಕ ರಾಜ್ಯ ನಾಗರೀಕ ಸೇವಾ ನಿಯಮಾವಳಿಗಳಿಗೆ ಇನ್ನಷ್ಟು ತಿದ್ದುಪಡಿ ಮಾಡುವ ನಿಯಮಗಳ ಕರಡನ್ನು ಅದರಿಂದ ತೊಂದರೆಗೊಳಗಾಗಬಹುದಾದ ಸಂಭವವಿರುವ ಎಲ್ಲಾ ವ್ಯಕ್ತಿಗಳಿಂದ ಅಧಿಕೃತ ರಾಜ್ಯ ಪತ್ರದಲ್ಲಿ ಈ ಕರಡು ಪ್ರಕಟವಾದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಆಕ್ಷೇಪಣೆಗಳು/ಸಲಹೆಗಳನ್ನು ಆಹ್ವಾನಿಸಿ, ದಿನಾಂಕ: 07.12.2011 ರಂದು ಕರ್ನಾಟಕ ರಾಜ್ಯ ಪತ್ರದ ಭಾಗ–4ಎ ರಲ್ಲಿ ಅಧಿಸೂಚನೆ ಸಂಖ್ಯೆ: ಎಫ್‌ಡಿ 04 ಎಸ್‌ಆರ್‌ಎ 2010, ದಿನಾಂಕ:07.12.2011ನ್ನು ಕರ್ನಾಟಕ ನಾಗರೀಕ ಸೇವಾ ಅಧಿನಿಯಮ 1978ರ (1990ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಪ್ರಕರಣ 8ರೊಂದಿಗೆ ಓದಿಕೊಳ್ಳಲಾಗುವ 3ನೇ ಪ್ರಕರಣದ (2)ನೇ ಉಪ ಪ್ರಕರಣದ ಖಂಡ(ಎ)ದ ಮೂಲಕ ಅಗತ್ಯಪಡಿಸಲಾದಂತೆ ಪ್ರಕಟಿಸಲಾಗಿರುವುದರಿಂದ;

ಸದರಿ ರಾಜ್ಯಪತ್ರವನ್ನು ದಿನಾಂಕ: 07.12.2011ರಂದು ಸಾರ್ವಜನಿಕರಿಗೆ ದೊರೆಯುವಂತೆ ಮಾಡಲಾಗಿದ್ದುದರಿಂದ ಮತ್ತು ಇದರ ಬಗ್ಗೆ ರಾಜ್ಯ ಸರ್ಕಾರಕ್ಕೆ ಯಾವುದೇ ರೀತಿಯ ಆಕ್ಷೇಪಣೆಗಳು/ಸಲಹೆಗಳು ಬಂದಿರುವುದಿಲ್ಲವಾದ್ದರಿಂದ;

ಈಗ 1978ರ ಕರ್ನಾಟಕ ರಾಜ್ಯ ನಾಗರೀಕ ಸೇವಾ ಅಧಿನಿಯಮದ (1990ರ ಕರ್ನಾಟಕ ಅಧಿನಿಯಮ ಸಂಖ್ಯೆ 14) ಪ್ರಕರಣ 8 ರೊಂದಿಗೆ ಓದಿಕೊಳ್ಳಲಾದ 3ನೇ ಪ್ರಕರಣ (1)ನೇ ಉಪ ಪ್ರಕರಣದಿಂದ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಕರ್ನಾಟಕ ಸರ್ಕಾರ ಈ ಕೆಳಗಿನ ನಿಯಮಗಳನ್ನು ಈ ಮೂಲಕ ಮಾಡುತ್ತದೆ, ಎಂದರೆ:–

ನಿಯಮಗಳು

1. ಶೀರ್ಷಿಕೆ ಮತ್ತು ಪ್ರಾರಂಭ–(1) ಈ ನಿಯಮಗಳನ್ನು ಕರ್ನಾಟಕ ನಾಗರೀಕ ಸೇವಾ (2ನೇ ತಿದ್ದುಪಡಿ) ನಿಯಮಗಳು, 2012 ಎಂದು ಕರೆಯತಕ್ಕದ್ದು.

(2) ಸರ್ಕಾರಿ ರಾಜ್ಯಪತ್ರದಲ್ಲಿ ಅವುಗಳನ್ನು ಪ್ರಕಟಿಸಿದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. 224–ಬಿ ನಿಯಮದ ತಿದ್ದುಪಡಿ:– ಕರ್ನಾಟಕ ನಾಗರೀಕ ಸೇವಾ ನಿಯಮಗಳಲ್ಲಿ (ಇಲ್ಲಿ ಇನ್ನು ಮುಂದೆ ಸದರಿ ನಿಯಮಗಳೆಂದು ಉಲ್ಲೇಖಿಸಲಾಗಿದೆ), 224–ಬಿ ನಿಯಮದ (1)ನೇ ಉಪ ನಿಯಮದಲ್ಲಿ "247,247–ಎ" ಎಂಬ ಅಂಕಿಗಳು ಮತ್ತು ಅಕ್ಷರವನ್ನು ಬಿಟ್ಟುಬಿಡತಕ್ಕದ್ದು.

3. 247–ಎ ನಿಯಮದ ಪ್ರತ್ಯಾಯೋಜನೆ:– ಸದರಿ ನಿಯಮಗಳ 247–ಎ ನಿಯಮಕ್ಕೆ ಈ ಮುಂದಿನದನ್ನು ಪ್ರತ್ಯಾಯೋಜಿಸತಕ್ಕದ್ದು, ಎಂದರೆ:–

"247–ಎ (1) ಕರ್ನಾಟಕ ಲೋಕಸೇವಾ ಆಯೋಗದ ಅಥವಾ ಇತರ ಆಯ್ಕೆ ಪ್ರಾಧಿಕಾರಗಳ ಮುಖಾಂತರ, ನೇಮಕಾತಿ ನಿಯಮಗಳಿಗೆ ಸುಸಂಗತವಾಗಿ ಅಥವಾ ಅವುಗಳಿಗನುಸಾರವಾಗಿ, ಮೂವತ್ತು ವರ್ಷ ವಯಸ್ಸು ತುಂಬಿದ ತರುವಾಯ ನೇರ ನೇಮಕಾತಿಯಾಗುವ ವ್ಯಕ್ತಿಗಳ ಸಂದರ್ಭದಲ್ಲಿ, ಅವರ ಅರ್ಹತಾ ಸೇವೆಗೆ, ಗರಿಷ್ಠ ಎರಡು ವರ್ಷಗಳಿಗೆ ಒಳಪಟ್ಟು, ನೇರ ನೇಮಕಾತಿಯ ದಿನಾಂಕದ ನಿಕಟಪೂರ್ವದ ಅವರ ಜನ್ಮ ದಿನಾಂಕದಂದು ಆಗಿದ್ದ ವಯಸ್ಸು ಮತ್ತು ಮೂವತ್ತು ವರ್ಷ–ಇವುಗಳ ನಡುವಿನ ವ್ಯತ್ಯಾಸಕ್ಕೆ ಸಮನಾದ ಅವಧಿಯನ್ನು ಸೇರಿಸತಕ್ಕದ್ದು.

(2) ಒಬ್ಬ ಸರ್ಕಾರಿ ನೌಕರನಿಗೆ, ಈ ನಿಯಮದ ಅಡಿಯಲ್ಲಿ ಹೆಚ್ಚುವರಿ ಅರ್ಹತಾ ಸೇವೆಯ ಜೊತೆಗೆ 219–ಎ ನಿಯಮಕ್ಕನುಗುಣವಾಗಿ ನಿವೃತ್ತಿ ವೇತನಕ್ಕಾಗಿ ಆತನ ಸೇವೆಯನ್ನು ಗಣನೆಗೆ ತೆಗೆದುಕೊಳ್ಳಲು ಅನುಮತಿಸಿದಲ್ಲಿ, ಮೂವತ್ತು ವರ್ಷಗಳ ವಯಸ್ಸನ್ನು ಮೀರಿ ಸಲ್ಲಿಸಲಾದ ಸೈನಿಕ ಸೇವೆಯ ಭಾಗವನ್ನು ಈ ನಿಯಮದ ಅಡಿಯಲ್ಲಿ ಅರ್ಹತಾ ಸೇವೆಗೆ ಸೇರ್ಪಡೆ ಮಾಡುವುದರಿಂದ ಕಳೆಯತಕ್ಕದ್ದು.

(3) ಅರ್ಹತಾ ಸೇವೆಗೆ ಸೇರಿಸಿದ ಹೆಚ್ಚುವರಿ ಸೇವಾವಧಿಯು ಪೂರ್ಣ ವರ್ಷಗಳಾಗಿರತಕ್ಕದ್ದು ಮತ್ತು ತಿಂಗಳುಗಳ ಮತ್ತು ದಿನಗಳ ಲೆಕ್ಕದಲ್ಲಿರಬಾರದು.

(4) ಅರ್ಹತಾ ಸೇವೆಗೆ ಮಾಡುವ ಸೇರ್ಪಡೆಯು, ನಿವೃತ್ತಿಯ ಅಥವಾ ಮರಣದ ದಿನಾಂಕದಂದು ಹತ್ತು ವರ್ಷಗಳಿಗಿಂತ ಕಡಿಮೆ ಅರ್ಹತಾ ಸೇವೆಯನ್ನು ಸಲ್ಲಿಸಿದ್ದ ಸರ್ಕಾರಿ ನೌಕರನಿಗೂ ದೊರೆಯತಕ್ಕದ್ದು.

(5) ಸರ್ಕಾರಿ ನೌಕರನ ಸೇವೆಯು ತ್ರಿವಿಧ ಸೌಲಭ್ಯ ಯೋಜನೆ ನಿಯಮಗಳ ಆಡಳಿತ ವ್ಯಾಪ್ತಿಯಿಂದ ಮುಕ್ತಾಯಗೊಂಡಾಗ ಮತ್ತು ನೇರ ನೇಮಕಾತಿಯ ಮೂಲಕ ಸರ್ಕಾರಿ ಸೇವೆಗೆ ಸೇರಿದಾಗ, (1ನೇ) ಉಪ ನಿಯಮದ ಉಪಬಂಧಗಳು ಸರ್ಕಾರಿ ನೌಕರನಿಗೆ ಅನುಕೂಲಕರವಾಗಿದ್ದರೆ, 248ನೇ ನಿಯಮದ ಅಡಿಯಲ್ಲಿ ಅಂಗೀಕಾರಾರ್ಹವಾದ ಅವಧಿಗೆ ಬದಲಾಗಿ ಅವುಗಳನ್ನು ವಿಸ್ತರಿಸಬಹುದು.

(6) ಮೂವತ್ತು ವರ್ಷಗಳನ್ನು ಮೀರಿದ ವಯಸ್ಸಿನಲ್ಲಿ ನ್ಯಾಯಾಂಗ ಸೇವೆಗೆ ನೇರನೇಮಕಾತಿಯಾದ ನ್ಯಾಯವಾದಿ ವರ್ಗದ ಬಾರ್ ಸದಸ್ಯನು, (1)ನೇ ಉಪ ನಿಯಮದ ಅಥವಾ 247ನೇ ನಿಯಮದ ಮೇರೆಗಿನ ಪ್ರಯೋಜನಕ್ಕೆ ಹಕ್ಕುಳ್ಳವನಾಗಿರತಕ್ಕದ್ದು, ಆದರೆ ಅವೆರಡಕ್ಕೂ ಅಲ್ಲ;

ಪರಂತು, ಈ ನಿಯಮದ ಅಡಿಯಲ್ಲಿ ಹೆಚ್ಚುವರಿ ಅರ್ಹತಾ ಸೇವೆಯನ್ನು ಸೇರಿಸಿಕೊಳ್ಳುವ ಅವಕಾಶ ಈ ಮುಂದಿನ ಸಂದರ್ಭಗಳಲ್ಲಿ ದೊರೆಯತಕ್ಕದ್ದಲ್ಲ;

(i). 235ನೇ ನಿಯಮದ ಅಡಿಯಲ್ಲಿ ಒಳಪಡುವ ನೌಕರರು;

(ii). ತ್ರಿವಿಧ ಲಾಭ ಯೋಜನೆ ನಿಯಮಗಳ ಅಡಿಯಲ್ಲಿ ಒಳಪಡುವ ನೌಕರರು;

(iii). ವರ್ಕ್‌ಚಾರ್ಜ್ ಸಿಬ್ಬಂದಿಯಾಗಿದ್ದು, ನಿಯತ ನಿವೃತ್ತಿ ವೇತನ ಸೇವೆಗಳಲ್ಲಿ ವಿಲೀನಗೊಂಡ ನೌಕರರು;

(iv). ಅನುಕಂಪದ ಆಧಾರದ ಮೇಲೆ ನೇಮಕಗೊಂಡ ನೌಕರರು;

(v). ಯಾರು ಈ ಮೊದಲು ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸಿದ್ದು, ನಂತರ ಯಾರ ಸೇವೆಗಳನ್ನು ಸರ್ಕಾರದಲ್ಲಿ ಕ್ರಮಬದ್ಧಗೊಳಿಸಲಾಗಿರುವುದೋ ಅಂಥಹ ನೌಕರರು;

(vi). ಯಾವ ಸ್ಟೈಫೆಂಡರಿ ಪದವೀಧರರ ಸೇವೆಯನ್ನು ತರುವಾಯದಲ್ಲಿ ಸರ್ಕಾರದಲ್ಲಿ ಕ್ರಮಬದ್ಧಗೊಳಿಸಲಾಗಿದೆಯೋ ಆ ಸ್ಟೈಫೆಂಡರಿ ಪದವೀಧರರು;

(vii). ಯಾವ ಗುತ್ತಿಗೆ ನೌಕರರ ಸೇವೆಗಳನ್ನು ವಿಶೇಷ ನಿಯಮಗಳ ಅಡಿಯಲ್ಲಿ ಸರ್ಕಾರದಲ್ಲಿ ಕ್ರಮಬದ್ಧಗೊಳಿಸಲಾಗಿದೆಯೋ ಆ ಗುತ್ತಿಗೆ ನೌಕರರು;

(viii). ಯಾವ ವ್ಯಕ್ತಿಗಳ ಪ್ರಾರಂಭಿಕ ನೇಮಕಾತಿಯು ಅಡ್‌ಹಾಕ್ ಆಧಾರದ ಮೇಲಾಗಿದ್ದು, ನಂತರ ಅವರ ಸೇವೆಯನ್ನು ವಿಲೀನಗೊಳಿಸುವ ಉದ್ದೇಶಕ್ಕಾಗಿ ರಚಿಸಲಾದ ವಿಶೇಷ ನಿಯಮಗಳ ಅಡಿಯಲ್ಲಿ ತರುವಾಯದಲ್ಲಿ ಸರ್ಕಾರಿ ಸೇವೆಯಲ್ಲಿ ವಿಲೀನಗೊಂಡಂಥ ವ್ಯಕ್ತಿಗಳು ಮತ್ತು

(ix). 1ನೇ ಏಪ್ರಿಲ್ 2006ರಂದು ಅಥವಾ ಆ ನಂತರ ನೇಮಕಗೊಂಡಿರುವ ವ್ಯಕ್ತಿಗಳು.

247–ಬಿ(1) ನೇಮಕಾತಿ ನಿಯಮಗಳಿಗೆ ಸುಸಂಗತವಾಗಿ ಅಥವಾ ಅವುಗಳಿಗನುಸಾರವಾಗಿ ಕರ್ನಾಟಕ ಲೋಕಸೇವಾ ಆಯೋಗದ ಅಥವಾ ಇತರ ಆಯ್ಕೆ ಪ್ರಾಧಿಕಾರಗಳ ಮುಖಾಂತರ ಮೂವತ್ತು ವರ್ಷ ವಯಸ್ಸು ತುಂಬಿದ ತರುವಾಯ ನೇಮಕಾತಿಯಾಗಿರುವ ಮಾಜಿ ಸೈನಿಕರ ಸಂದರ್ಭದಲ್ಲಿ ಮತ್ತು ಸೈನಿಕ ಸೇವೆಯಡಿಯಲ್ಲಿ ಆತನು ಸಲ್ಲಿಸಿದ ಸೇವೆಗಾಗಿ ಸೈನಿಕ ನಿವೃತ್ತಿ ವೇತನವನ್ನು ಪಡೆಯುತ್ತಿದ್ದರೆ ಮತ್ತು ಸೈನಿಕ ನಿವೃತ್ತಿ ವೇತನಕ್ಕೆ ಬದಲಾಗಿ ರಾಜ್ಯ ಸರ್ಕಾರದಲ್ಲಿ ಸಂಯೋಜಿತ ನಿವೃತ್ತಿ ವೇತನಕ್ಕಾಗಿ ಆತನ ಹಿಂದಿನ ಸೈನಿಕ ಸೇವೆಯನ್ನು ಗಣನೆಗೆ ತೆಗೆದುಕೊಳ್ಳಲು ಅನುಮತಿಸಲಾಗಿಲ್ಲದಿದ್ದರೆ, ಗರಿಷ್ಠ ನಾಲ್ಕು ವರ್ಷಗಳಿಗೆ ಒಳಪಟ್ಟು, ನೇರ ನೇಮಕಾತಿಯ ದಿನಾಂಕದ ನಿಕಟಪೂರ್ವದಲ್ಲಿನ ಅವರ ಜನ್ಮ ದಿನಾಂಕದಂದು ಆಗಿದ್ದ ವಯಸ್ಸು ಮತ್ತು ಮೂವತ್ತು ವರ್ಷಗಳು – ಇವುಗಳ ನಡುವಿನ ವ್ಯತ್ಯಾಸಕ್ಕೆ ಸಮನಾದ ಅವಧಿಯನ್ನು ಅವರ ಅರ್ಹತಾ ಸೇವೆಗೆ ಸೇರಿಸತಕ್ಕದ್ದು.

(2) ಅರ್ಹತಾ ಸೇವೆಗೆ ಸೇರಿಸಿದ ಹೆಚ್ಚುವರಿ ಸೇವಾವಧಿಯು ಪೂರ್ಣ ವರ್ಷಗಳಾಗಿರತಕ್ಕದ್ದು ಮತ್ತು ತಿಂಗಳುಗಳ ಮತ್ತು ದಿನಗಳ ಲೆಕ್ಕದಲ್ಲಿರಬಾರದು.

(3) ಅರ್ಹತಾ ಸೇವೆಗೆ ಹೆಚ್ಚುವರಿ ಸೇವೆಯನ್ನು ಸೇರಿಸಿಕೊಳ್ಳುವ ಅವಕಾಶವು ನಿವೃತ್ತಿ ಸಮಯದಲ್ಲಿ ಅಥವಾ ಮರಣ ಹೊಂದಿದಾಗ ಹತ್ತು ವರ್ಷಗಳಿಗೂ ಕಡಿಮೆ ಅರ್ಹತಾ ಸೇವೆ ಸಲ್ಲಿಸಿದ್ದ ಸರ್ಕಾರಿ ನೌಕರನಿಗೂ ದೊರೆಯತಕ್ಕದ್ದು.

ಪರಂತು, ಮೂವತ್ತು ವರ್ಷಗಳ ವಯಸ್ಸನ್ನು ಪೂರ್ಣಗೊಳಿಸಿದ ತರುವಾಯ ಸಲ್ಲಿಸಿದ ಸೈನಿಕ ಸೇವೆಯ ಅವಧಿಯನ್ನು (1)ನೇ ಉಪ ನಿಯಮದ ಅಡಿಯಲ್ಲಿನ ಸೌಲಭ್ಯವನ್ನು ನೀಡುವಾಗ ಕಡಿತಗೊಳಿಸತಕ್ಕದ್ದು.

ಪರಂತು, ಈ ನಿಯಮಗಳು 1ನೇ ಏಪ್ರಿಲ್ 2006ರಂದು ಅಥವಾ ತರುವಾಯ ರಾಜ್ಯ ಸರ್ಕಾರಿ ಸೇವೆಗೆ ಸೇರುವ ಹೊಸ ನೌಕರರಿಗೆ ಅನ್ವಯಿಸತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ತಿದ್ದುಪಡಿ ಸಂಖ್ಯೆ: 1273.

ಆಲಿಸ್ ಗೊನ್ಸಾಲ್ವಿಸ್
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು–1).

ದೂ: 22033135.

FINANCE SECRETARIAT

NOTIFICATION

No. FD 4 SRA 2010, Bangalore, Dated: 15.02.2012

Whereas the draft of the following rule further to amend the Karnataka Civil Services Rules, was published as required by clause(a) of sub-section-(2) of Section 3 read with section 8 of the Karnataka Civil Services Act, 1978 (Karnataka Act 14 of 1990) in Notification No. FD 04 SRA 2010 dated 07.12.2011 in Part IVA of the Karnataka Gazette dated 07.12.2011 inviting objection and suggestions from all persons likely to be affected thereby within fifteen days from the date of its publication in the Official Gazette.

Whereas the said Gazette was made available to the public on 07.12.2011.

And whereas, no objections and suggestions have been received by the State Government.

Now, therefore, in exercise of the powers conferred by sub-section(1) of Section 3 read with Section 8 of the Karnataka State Civil Services Act, 1978 (Karnataka Act 14 of 1990), the Government of Karnataka hereby makes the following rule, namely:-

RULES

1. Title and commencement.- (1) These rules may be called the Karnataka Civil Services (2^{nd} Amendment) Rules, 2012.

(2) They shall come into force from the date of their publication in the official Gazette.

2. Amendment of rule 224B.- In the Karnataka Civil Services Rules, (herein after referred to as the said rules) in Rule 224-B, in sub-rule(1) the figures and letter "247, 247-A", shall be omitted.

3. Substitution of rule 247-A.- For Rule 247-A of the said rules, the following shall be substituted, namely:-

"247-A (1) In case of persons directly recruited after completing the age of 30 years in consonance with or pursuant to the rules of recruitment, through Karnataka Public Service Commission or other recruiting authorities, there shall be added to their qualifying service, a period equal to the difference between the age on their date of birth immediately preceding the date of direct recruitment and thirty years, subject to a maximum of two years.

(2) Where a Government servant is allowed to count his service for pension in accordance with rule 219-A together with additional qualifying service under this rule, the portion of military service exceeding thirty years of age shall be deducted from the addition to qualifying service under this rule.

(3) The addition to qualifying service shall be in terms of completed years and not in terms of months and days.

(4) The addition to qualifying service is also admissible to a Government servant who had rendered qualifying service of less than ten years on the date of retirement or death.

(5) When the Government servant ceases to be governed by Triple Benefit Scheme rules and enters Government service by recruitment, the provisions of sub-rule(1) may be extended if it is advantageous to the Government servant in lieu of the period admissible under rule 248.

(6) A member of the Bar who is recruited to Judicial Service at an age exceeding 30 years shall be entitled to the benefit under sub-rule (1) or rule 247, but not both:

Provided that the addition of qualifying service under this rule is not admissible to:-

(i). Employees governed under rule 235;

(ii). Employees governed by Triple Benefit Scheme Rules;

(iii). Employees borne on work charged establishment absorbed in regular pensionable service;

(iv). Employees appointed on compassionate grounds;

(v). Employees who were earlier working on daily wage basis and whose services are subsequently regularized in Government;

(vi). Stipendiary graduates whose services are subsequently regularized in Government;

(vii). Contract employees whose services have been regularized in Government under Special Rules;

(viii). Persons whose initial appointment was on adhoc basis and subsequently absorbed into Government service under special rules made for that purpose; and

(ix). Persons who are appointed on or after 1st April 2006.

247-B (1) In the case of an Ex-military person who is directly recruited after completing the age of thirty years in consonance with or pursuant to the rules of recruitment, through the Karnataka Public Service Commission or other recruitment authorities, and if he is in receipt of military pension for service rendered by him under military service, and has not been allowed to count his previous military service for a combined pension under the State Government in lieu of military pension, there shall be added to his qualifying service a period equal to the difference between the age on his date of birth immediately preceding the date of direct recruitment and thirty years subject to a maximum of four years.

(2) The addition to qualifying service shall be in terms of completed years and not in terms of months and days.

(3) The addition to qualifying service is also admissible to a Government servant who had rendered qualifying service of less than ten years on the date of retirement or death;

Provided that the military service rendered after the age of thirty years shall be deducted while giving the benefit under sub-rule (1);

Provided further that these rules are not applicable to persons newly appointed on or after 1st April 2006.

By order and in the name of the Governor of Karnataka,

C.S.No. 1273.

ALICE GONSALVES
Under Secretary to Govt.
Finance Dept. (Services-1)
Phone: 22033135.

ವಿಶೇಷ ಪತ್ರಿಕೆ

ಭಾಗ – I	ಬೆಂಗಳೂರು, ಗುರುವಾರ, ಫೆಬ್ರವರಿ ೧೬, ೨೦೧೨ (ಮಾಘ ೨೭, ಶಕ ವರ್ಷ ೧೯೩೩)	ನಂ. ೧೧೬

ಆರ್ಥಿಕ ಸಚಿವಾಲಯ

ಅಧಿಕೃತ ಜ್ಞಾಪನ

ಸಂಖ್ಯೆ: ಎಫ್‌ಡಿ 04 ಎಸ್‌ಆರ್‌ಎ 2010, ಬೆಂಗಳೂರು, ದಿನಾಂಕ: 16–02–2012

ವಿಷಯ:– ಕರ್ನಾಟಕ ನಾಗರಿಕ ಸೇವಾ ನಿಯಮಾವಳಿಯ ನಿಯಮ 247, 247–ಎ ಮತ್ತು 247–ಬಿ ರಡಿ ಅರ್ಹತಾದಾಯಕ ಸೇವೆಯನ್ನು ಪರಿಗಣಿಸುವ ಬಗ್ಗೆ.

ಕರ್ನಾಟಕ ನಾಗರೀಕ ಸೇವಾ ನಿಯಮಗಳಲ್ಲಿ ಹೊಸ ನಿಯಮ 224–ಬಿ ಯನ್ನು ಸೇರ್ಪಡೆ ಮಾಡಿ ನಿವೃತ್ತಿ ವೇತನಕ್ಕೆ ಅರ್ಹತಾದಾಯಕ ಸೇವೆಯ ಪರಿಗಣನೆಗಾಗಿ ಅನುಸರಿಸಬೇಕಾದ ವಿಧಿ ವಿಧಾನಗಳನ್ನು ತಿಳಿಸಲಾಗಿತ್ತು. ಈ ನಿಯಮದನ್ವಯ, ನಿಯಮ 247, 247–ಎ ಇತ್ಯಾದಿ ನಿಯಮಗಳಡಿಯಲ್ಲಿ ಸಂದರ್ಭಾನುಸಾರ ನಿವೃತ್ತಿ ವೇತನಕ್ಕಾಗಿ ಹೆಚ್ಚುವರಿ ಸೇವೆಯ ಸೌಲಭ್ಯವನ್ನು ಪಡೆಯಲಿಚ್ಛಿಸುವ ಸರ್ಕಾರಿ ನೌಕರರು ನಿಗದಿತ ಅವಧಿಯಲ್ಲಿ ನೇಮಕಾತಿ ಪ್ರಾಧಿಕಾರಕ್ಕೆ ಕ್ಲೈಮ್ ಸಲ್ಲಿಸುವ ಅಗತ್ಯತೆ ಇತ್ತು ಮತ್ತು ಈ ಕ್ಲೈಮ್‌ನ್ನು ಸಮರ್ಥಿಸುವ ದಾಖಲೆಗಳನ್ನು ಪರಿಶೀಲಿಸಿ, ಸರ್ಕಾರವು ನಿರ್ಧಿಷ್ಟವಾದ ಅನುಮೋದನೆ ನೀಡಬೇಕಿತ್ತು. ದಿನಾಂಕ:15.02.2012 ರ ಅಧಿಸೂಚನೆಯಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ

ನಿಯಮ224–ಬಿ ಗೆ ತಿದ್ದುಪಡಿ ತರಲಾಗಿದ್ದು, ಈ ನಿಯಮದ ವ್ಯಾಪ್ತಿಯಿಂದ ನಿಯಮ 247 ಮತ್ತು 247–ಎ ರಡಿ ಬರುವ ಪ್ರಕರಣಗಳನ್ನು ಹೊರಗಿಡಲಾಗಿದೆ.

2. ಹಾಗೆಯೇ, ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 247–ಎ ಗೆ ತಿದ್ದುಪಡಿ ತಂದು, ಪಿಂಚಣಿ ಉದ್ದೇಶಕ್ಕೆ ಪರಿಗಣಿಸಬಹುದಾದ ಅರ್ಹತಾದಾಯಕ ಸೇವೆಯ ಗರಿಷ್ಠ ಮಿತಿಯನ್ನು ಎರಡು ವರ್ಷಗಳಿಗೆ ಇಳಿಸಲಾಗಿದೆ. ಮಾಜಿ ಸೈನಿಕರಿಗೆ ಸಂಬಂಧಪಟ್ಟಂತೆ ಹೊಸ ನಿಯಮ 247–ಬಿ ಯನ್ನು ಸೇರ್ಪಡೆ ಮಾಡಲಾಗಿದ್ದು, ಈ ನಿಯಮದಡಿ ಪಡೆಯಬಹುದಾದ ಗರಿಷ್ಠ ಅರ್ಹತಾದಾಯಕ ಸೇವಾ ಮಿತಿಯನ್ನು ನಾಲ್ಕು ವರ್ಷಗಳಿಗೆ ನಿಗದಿಪಡಿಸಲಾಗಿದೆ. ನಿಯಮ 247–ಎ ಅನ್ವಯ ಕರ್ನಾಟಕ ಲೋಕಸೇವಾ ಆಯೋಗ ಮತ್ತು ಇತರ ಆಯ್ಕೆ ಪ್ರಾಧಿಕಾರಗಳ ಮುಖಾಂತರ ನೇಮಕಾತಿ ನಿಯಮಗಳಿಗೆ ಸುಸಂಗತವಾಗಿ ಅಥವಾ ಅವುಗಳಿಗನುಸಾರವಾಗಿ 30 ವರ್ಷಗಳ ವಯಸ್ಸನ್ನು ಪೂರ್ತಿಗೊಳಿಸಿದ ತರುವಾಯ ಸರ್ಕಾರಿ ಸೇವೆಗೆ ನೇರ ನೇಮಕಾತಿಯಾಗುವ ವ್ಯಕ್ತಿಗಳಿಗೆ ಗರಿಷ್ಠ ಎರಡು ವರ್ಷಗಳ ಮಿತಿಗೊಳಪಟ್ಟು, ನೇರ ನೇಮಕಾತಿಯ ದಿನಾಂಕದ ನಿಕಟ ಪೂರ್ವದ ಅವರ ಜನ್ಮ ದಿನಾಂಕದಂದು ಆಗಿದ್ದ ವಯಸ್ಸು ಮತ್ತು 30 ವರ್ಷ ಇವುಗಳ ನಡುವಿನ ವ್ಯತ್ಯಾಸಕ್ಕೆ ಸಮನಾದ ಅವಧಿಯನ್ನು ಪಿಂಚಣಿ ಉದ್ದೇಶಕ್ಕೆ ಮಾತ್ರ ಅರ್ಹತಾದಾಯಕ ಸೇವೆಯಾಗಿ ಸೇರಿಸುವ ಅವಕಾಶವಿದೆ. ನಿಯಮ 247–ಎ ಯ ಸೌಲಭ್ಯವು ಕೆಳಕಂಡ ಸಂದರ್ಭಗಳಲ್ಲಿ ದೊರೆಯುವುದಿಲ್ಲ:–

(1) 235 ನೇ ನಿಯಮದಡಿಯಲ್ಲಿ ಒಳಪಡುವ ನೌಕರರು.

(2) ತ್ರಿವಿಧ ಲಾಭ ಯೋಜನೆ ನಿಯಮಗಳ ಅಡಿಯಲ್ಲಿ ಒಳಪಡುವ ನೌಕರರು;

(3) ವರ್ಕ್‌ಚಾರ್ಜ್ ಸಿಬ್ಬಂದಿಯಾಗಿದ್ದು, ನಿಯತ ನಿವೃತ್ತಿ ವೇತನ ಸೇವೆಗಳಲ್ಲಿ ವಿಲೀನಗೊಂಡ ನೌಕರರು;

(4) ಅನುಕಂಪದ ಆಧಾರದ ಮೇಲೆ ನೇಮಕಗೊಂಡ ನೌಕರರು;

(5) ಈ ಮೊದಲು ದಿನಗೂಲಿ ಆಧಾರದ ಮೇಲೆ ಕಾರ್ಯನಿರ್ವಹಿಸಿದ್ದು, ನಂತರ ಯಾರ ಸೇವೆಗಳನ್ನು ಸರ್ಕಾರದಲ್ಲಿ ಕ್ರಮಬದ್ಧಗೊಳಿಸಲಾಗಿರುವುದೋ ಅಂತಹ ನೌಕರರು;

(6) ಯಾವ ಸ್ಟೈಫೆಂಡರಿ ಪದವೀಧರರ ಸೇವೆಯನ್ನು ತರುವಾಯದಲ್ಲಿ ಸರ್ಕಾರದಲ್ಲಿ ಕ್ರಮಬದ್ಧಗೊಳಿಸಲಾಗಿದೆಯೋ ಆ ಸ್ಟೈಫೆಂಡರಿ ಪದವೀಧರರು;

(7) ಯಾವ ಗುತ್ತಿಗೆ ನೌಕರರ ಸೇವೆಗಳನ್ನು ವಿಶೇಷ ನಿಯಮಗಳ ಅಡಿಯಲ್ಲಿ ಸರ್ಕಾರದಲ್ಲಿ ಕ್ರಮಬದ್ಧಗೊಳಿಸಲಾಗಿದೆಯೋ ಆ ಗುತ್ತಿಗೆ ನೌಕರರು;

(8) ಯಾವ ವ್ಯಕ್ತಿಗಳ ಪ್ರಾರಂಭಿಕ ನೇಮಕಾತಿಯು ಅಡ್‌ಹಾಕ್ ಆಧಾರದ ಮೇಲಾಗಿದ್ದು, ನಂತರ ಅವರ ಸೇವೆಯನ್ನು ವಿಲೀನಗೊಳಿಸುವ ಉದ್ದೇಶಕ್ಕಾಗಿ ರಚಿಸಲಾದ ವಿಶೇಷ ನಿಯಮಗಳ ಅಡಿಯಲ್ಲಿ ತರುವಾಯದಲ್ಲಿ ಸರ್ಕಾರಿ ಸೇವೆಯಲ್ಲಿ ವಿಲೀನಗೊಂಡಂತ ವ್ಯಕ್ತಿಗಳು ಮತ್ತು

(9) 1ನೇ ಏಪ್ರಿಲ್ 2006 ರಂದು ಅಥವಾ ಆ ನಂತರ ನೇಮಕಗೊಂಡಿರುವ ವ್ಯಕ್ತಿಗಳು.

3. ನಿಯಮ 247–ಬಿ ಅಡಿಯಲ್ಲಿ ಕರ್ನಾಟಕ ಲೋಕಸೇವಾ ಆಯೋಗ ಅಥವಾ ಇತರ ಆಯ್ಕೆ ಪ್ರಾಧಿಕಾರಗಳ ಮುಖಾಂತರ ನೇಮಕಾತಿಯಾಗುವ ಮಾಜಿ ಸೈನಿಕರಿಗೆ ನಿಯಮಗಳಲ್ಲಿ ವಿಧಿಸಿರುವ ಷರತ್ತಿಗೊಳಪಟ್ಟು ಗರಿಷ್ಠ ನಾಲ್ಕು ವರ್ಷಗಳ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ಪಿಂಚಣಿ ಉದ್ದೇಶಕ್ಕೆ ಪರಿಗಣಿಸಲು ಅವಕಾಶವಿದೆ. ನಿಯಮ 247–ಬಿ ರ ಉಪನಿಯಮ (3) ರ ಪರಂತುಕದ ಪ್ರಕಾರ ಮಾಜಿ ಸೈನಿಕರು 30 ವರ್ಷಗಳ ವಯಸ್ಸನ್ನು ಪೂರ್ಣಗೊಳಿಸುವ ತರುವಾಯ ಸಲ್ಲಿಸಿದ ಸೈನಿಕ ಸೇವೆಯ ಅವಧಿಯನ್ನು ಈ ನಿಯಮದ ಅಡಿಯಲ್ಲಿ ಸೌಲಭ್ಯವನ್ನು ವಿಸ್ತರಿಸುವಾಗ ಕಡಿತಗೊಳಿಸಬೇಕಾಗುತ್ತದೆ. ಉದಾ: ಒಂದು ವೇಳೆ ಮಾಜಿ ಸೈನಿಕನು 40 ವರ್ಷಗಳ ವಯಸ್ಸಿನಲ್ಲಿ ಸರ್ಕಾರಿ ಸೇವೆಗೆ ಸೇರಿದ್ದು, ಆತನು 35 ವರ್ಷಗಳ ವಯಸ್ಸಿನವರೆಗೆ ಸೈನಿಕ ಸೇವೆಯನ್ನು ಸಲ್ಲಿಸಿದ್ದಲ್ಲಿ, ಕೆಳಕಂಡಂತೆ ಆತನು ಅರ್ಹತಾದಾಯಕ ಸೇವೆಯನ್ನು ಪಡೆಯಲು ಅರ್ಹನಿರುತ್ತಾನೆ:–

ಸರ್ಕಾರಿ ಸೇವೆಗೆ ಸೇರಿದ ಸಮಯದಲ್ಲಿ ಆತನ ವಯಸ್ಸು	40 ವರ್ಷಗಳು
ನೇರ ನೇಮಕಾತಿ ದಿನಾಂಕದಂದು ಆತನ ವಯಸ್ಸು ಮತ್ತು 30 ವರ್ಷ ನಡುವಿನ ವ್ಯತ್ಯಾಸ	10 ವರ್ಷಗಳು
ಸೈನಿಕ ಸೇವೆಯಲ್ಲಿ 30 ವರ್ಷಗಳ ನಂತರ ಸಲ್ಲಿಸಿದ ಸೇವೆಯಿಂದ ಕಡಿತಗೊಂಡ ಅವಧಿ	05 ವರ್ಷಗಳು
ನಿಯಮಾನುಸಾರ ಅರ್ಹವಾಗುವ ಹೆಚ್ಚುವರಿ ಸೇವೆ	05 ವರ್ಷಗಳು
ನಿಯಮಾನುಸಾರ ಸೀಮಿತಗೊಳಿಸಬೇಕಾದ ಅವಧಿ	04 ವರ್ಷಗಳು

4. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ224–ಬಿ ರ ವಿಧಿವಿಧಾನಗಳು ನಿಯಮ 247, 247–ಎ ಮತ್ತು 247–ಬಿ ರ ವ್ಯಾಪ್ತಿಗೆ ಬರುವ ಪ್ರಕರಣಗಳಿಗೆ ಅನ್ವಯವಾಗುವುದಿಲ್ಲವಾದ್ದರಿಂದ, ಇಂತಹ ಪ್ರಕರಣಗಳಲ್ಲಿ ಮಹಾಲೇಖಪಾಲರು ನೌಕರರ ನಿವೃತ್ತಿ ಸಮಯದಲ್ಲಿ, ನಿವೃತ್ತಿ ವೇತನ ಸೌಲಭ್ಯಗಳನ್ನು ಅನುಮತಿಸುವ ಸಂದರ್ಭದಲ್ಲಿ, ಅರ್ಹ ಪ್ರಕರಣಗಳಲ್ಲಿ ಈ ನಿಯಮಗಳಡಿಯಲ್ಲಿ ಲಭ್ಯವಾಗುವ ಹೆಚ್ಚುವರಿ ಸೇವೆಯನ್ನು ಸಹ ಸೇರಿಸಿ ಪಿಂಚಣಿ ಸೌಲಭ್ಯವನ್ನು ಇತ್ಯರ್ಥಪಡಿಸಲು ಅನುಮತಿಸಲಾಗಿದೆ. ಇಂತಹ ಸಂದರ್ಭದಲ್ಲಿ ಸರ್ಕಾರದ ನಿರ್ದಿಷ್ಟ ಅನುಮೋದನೆ ಅಗತ್ಯವಿರುವುದಿಲ್ಲ. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 6 ರನ್ವಯ ನಿವೃತ್ತಿ ಸೌಲಭ್ಯಗಳಿಗೆ ಸಂಬಂಧಪಟ್ಟಂತೆ ಸರ್ಕಾರಿ ನೌಕರನ ನಿವೃತ್ತಿ ಸಮಯದಲ್ಲಿ ಜಾರಿಯಲ್ಲಿದ್ದ ನಿಯಮಗಳು ಅನ್ವಯವಾಗುವುದರಿಂದ, ಈಗಾಗಲೇ ಸರ್ಕಾರದ ಅನುಮೋದನೆಯೊಂದಿಗೆ ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ಸೇರಿಸಲು ಆದೇಶ ಹೊರಡಿಸಿರುವ ಪ್ರಕರಣಗಳಲ್ಲೂ ಸಹ ನೌಕರರು ನಿವೃತ್ತರಾಗುವ ಸಮಯದಲ್ಲಿ ಜಾರಿಯಲ್ಲಿರುವ ನಿಯಮಾನುಸಾರ ಲಭ್ಯವಾಗುವ ಗರಿಷ್ಠ ಅರ್ಹತಾದಾಯಕ ಸೇವೆಗೆ ಸೀಮಿತಗೊಳಿಸಿ ಪಿಂಚಣಿ ಸೌಲಭ್ಯಗಳನ್ನು ಇತ್ಯರ್ಥಪಡಿಸತಕ್ಕದ್ದು. ಇನ್ನೂ ಬಾಕಿ ಇರುವ ಅರ್ಹ ಪ್ರಕರಣಗಳಲ್ಲಿಯೂ ಸಹ ಮಹಾಲೇಖಪಾಲರು ನೌಕರರ ನಿವೃತ್ತಿ ಸಮಯದಲ್ಲಿ ಜಾರಿಯಲ್ಲಿದ್ದ ನಿಯಮಗಳನ್ವಯ ಗರಿಷ್ಠ ಹೆಚ್ಚುವರಿ ಸೇರ್ಪಡೆಯ ಅವಕಾಶವನ್ನು ಗಮನದಲ್ಲಿಟ್ಟುಕೊಂಡು, ಹೆಚ್ಚುವರಿ ಅರ್ಹತಾದಾಯಕ ಸೇವೆಯನ್ನು ಪರಿಗಣಿಸಿ, ಪಿಂಚಣಿ ಸೌಲಭ್ಯಗಳನ್ನು ಇತ್ಯರ್ಥಪಡಿಸಲು ಅಥವಾ ಪರಿಷ್ಕರಿಸಲು ಕ್ರಮವಹಿಸತಕ್ಕದ್ದು.

5. ಇಲಾಖಾ ಪ್ರಧಾನ ಕಾರ್ಯದರ್ಶಿಗಳು ಮತ್ತು ಇಲಾಖಾ ಕಾರ್ಯದರ್ಶಿಯವರು ಈ ತಿದ್ದುಪಡಿಯನ್ನು ಗಮನಕ್ಕೆ ತೆಗೆದುಕೊಂಡು ಇನ್ನು ಮುಂದೆ ಈ ನಿಯಮಗಳ ವ್ಯಾಪ್ತಿಗೆ ಬರುವ ಪ್ರಕರಣಗಳನ್ನು ತಿದ್ದುಪಡಿ ನಿಯಮಗಳನುಸಾರವೇ ಇತ್ಯರ್ಥಪಡಿಸಲು ಅಗತ್ಯ ಕ್ರಮ ತೆಗೆದುಕೊಳ್ಳುವಂತೆ ಸೂಚಿಸಿದೆ.

ಆಲಿಸ್ ಗೊನ್ಸಾಲ್ವಿಸ್
ಸರ್ಕಾರದ ಅಧೀನ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ಸೇವೆಗಳು–1)

ವಿಶೇಷ ಪತ್ರಿಕೆ

ಭಾಗ - IV-A	ಬೆಂಗಳೂರು, ಶುಕ್ರವಾರ, ಫೆಬ್ರವರಿ ೧೭, ೨೦೧೨ (ಮಾಘ ೨೮, ಶಕ ವರ್ಷ ೧೯೩೩)	ನಂ. ೧೧೭

ಸಹಕಾರ ಸಚಿವಾಲಯ

ಕೃಷಿ ಮಾರಾಟ ಇಲಾಖೆ

ಕೃಷಿ ಮಾರಾಟ ನಿರ್ದೇಶಕರ ಕಛೇರಿ, ನಂ. 16, 11ನೇ ರಾಜಭವನ ರಸ್ತೆ, ಪಿ.ಬಿ.ನಂ. 5309, ಬೆಂಗಳೂರು

ಅಧಿಸೂಚನೆ

ಸಂಖ್ಯೆ: ಕೃಮಾಇ:02:ಚುನಾವಣೆ:2011, ಬೆಂಗಳೂರು, ದಿನಾಂಕ: 14.2.2012

ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 1966ರ ಕಲಂ 102 ಹಾಗೂ ನಿಯಮಾವಳಿಗಳು, 1968ರ ನಿಯಮ 88ಐರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕದಲ್ಲಿನ ಕೃಷಿ ಮಾರಾಟ ಇಲಾಖೆಯ ನಿರ್ದೇಶಕನಾದ ಡಾ: ಸಿ.ಸೋಮಶೇಖರ ಆದ ನಾನು, ಗುಲ್ಬರ್ಗಾ ಜಿಲ್ಲೆಯಿಂದ ಕರ್ನಾಟಕ ರಾಜ್ಯ ಕೃಷಿ ಮಾರಾಟ ಮಂಡಳಿಗೆ ಆಯ್ಕೆಯಾದ ಸದಸ್ಯರ ಹೆಸರನ್ನು ಈ ಕೆಳಕಂಡಂತೆ ಪ್ರಕಟಿಸಿರುತ್ತೇನೆ.

ಕ್ರಮ ಸಂಖ್ಯೆ	ಜಿಲ್ಲೆಯ ಹೆಸರು	ಆಯ್ಕೆಯಾದ ಸದಸ್ಯರ ಹೆಸರು
1	ಗುಲ್ಬರ್ಗಾ	ಶ್ರೀ ನಾಗೇಂದ್ರಪ್ಪ ಶಂಕ್ರಪ್ಪ ರುದ್ನೂರ ಅಧ್ಯಕ್ಷರು, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಸೇಡಂ.

ಡಾ: ಸಿ.ಸೋಮಶೇಖರ
ನಿರ್ದೇಶಕರು

ಸಿ.ಕೆ. ವಾಸುದೇವ ಮೂರ್ತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಸಹಕಾರ ಇಲಾಖೆ

ವಿಶೇಷ ಪತ್ರಿಕೆ

ಭಾಗ – V	ಬೆಂಗಳೂರು, ಶುಕ್ರವಾರ, ಫೆಬ್ರವರಿ ೧೭, ೨೦೧೨ (ಮಾಘ ೨೮, ಶಕ ವರ್ಷ ೧೯೩೩)	ನಂ. ೧೨೦

ಕರ್ನಾಟಕ ವಿಧಾನ ಸಭೆ ಸಚಿವಾಲಯ

ಅಧಿಸೂಚನೆ

ಸಂಖ್ಯೆಃ ಕವಿಸಸ/ಆ–1/26/ವಾ.ಚಾ.ನೇ.ನೇ./2012, ಬೆಂಗಳೂರು, ದಿನಾಂಕಃ 17.02.2012

ವಿಷಯಃ ಕರ್ನಾಟಕ ವಿಧಾನ ಸಭೆ ಸಚಿವಾಲಯದಲ್ಲಿ ವಾಹನ ಚಾಲಕರ ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡುವ ಬಗ್ಗೆ.

ಕರ್ನಾಟಕ ವಿಧಾನ ಸಭೆ ಸಚಿವಾಯದ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು 2003 ಹಾಗೂ ತಿದ್ದುಪಡಿ ನಿಯಮಾವಳಿ 2009ರಡಿಯಲ್ಲಿ ಕರ್ನಾಟಕ ವಿಧಾನಸಭೆ ಸಚಿವಾಲಯದ ವಾಹನ ಚಾಲಕರ ಹುದ್ದೆಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಗಳ ವಿವರಗಳು ಈ ಕೆಳಕಂಡಂತಿರುತ್ತವೆ.

ಹುದ್ದೆಯ ಹೆಸರು ಃ ವಾಹನ ಚಾಲಕ

ಹುದ್ದೆಗಳ ಸಂಖ್ಯೆ ಃ 26 ಹುದ್ದೆಗಳು

ವೇತನ ಶ್ರೇಣಿ ಃ ರೂ. 5800–100–6000–125–6500–150–7100–175–7800–200–8600–225–9500–250–10500

	ಮೀಸಲಾತಿ ವರ್ಗೀಕರಣ	ಸಮತಳ ಮೀಸಲಾತಿ ವರ್ಗೀಕರಣ						
ಕ್ರ.ಸಂ.	ಮೀಸಲಾತಿ	ಸಾಮಾನ್ಯ ಅರ್ಹತೆ	ಮಾಜಿ ಸೈನಿಕ	ಗ್ರಾಮೀಣ ಅಭ್ಯರ್ಥಿ	ಕನ್ನಡ ಮಾಧ್ಯಮ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಯೋಜನೆಗಳಿಂದ ನಿರಾಶ್ರಿತಗೊಂಡ ಅಭ್ಯರ್ಥಿ	ಖಾಲಿ ಇರುವ ಒಟ್ಟು ಹುದ್ದೆಗಳ ಸಂಖ್ಯೆ
1.	ಪ.ಜಾ.	02	––	01	01	––	––	04
2.	ಸಾಮಾನ್ಯ	08	01	03	––	––	01	13
3.	ಪ್ರವರ್ಗ–I	01	––	––	––	––	––	01
4.	II ಎ	02	––	01	01	––	––	04
5.	IIಬಿ	01	––	––	––	––	––	01
6.	IIIಎ	01	––	01	––	––	––	02
7.	IIIಬಿ	01	––	––	––	––	––	01

1. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 17.03.2012.**
2. ಅರ್ಜಿ ಸಲ್ಲಿಸಬೇಕಾದ ವಿಳಾಸಃ ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಸಚಿವಾಲಯ, ಅಂಚೆ ಪೆಟ್ಟಿಗೆ ಸಂಖ್ಯೆಃ 5074, ಮೊದಲನೆ ಮಹಡಿ, ವಿಧಾನ ಸೌಧ, ಬೆಂಗಳೂರು–560 233.
3. ಕರ್ನಾಟಕ ವಿಧಾನ ಸಭೆ ಸಚಿವಾಲಯದ (ನೇಮಕಾತಿ ಹಾಗೂ ಸೇವಾ ಷರತ್ತುಗಳು) ನಿಯಮಾವಳಿಗಳನುಸಾರ ವಾಹನ ಚಾಲಕರ ಹುದ್ದೆಯ ಭರ್ತಿಗಾಗಿ ಅರ್ಹತೆಯುಳ್ಳ ಅಭ್ಯರ್ಥಿಗಳು ಅರ್ಜಿ ನಮೂನೆ–Iರ ದ್ವಿಪ್ರತಿಯಲ್ಲಿ ಅರ್ಜಿಗಳನ್ನು ಸರ್ಕಾರಿ ಪುಸ್ತಕ ಮಳಿಗೆಯಿಂದ ಪಡೆದು ವಿಧಾನಸಭೆ ಸಚಿವಾಲಯಕ್ಕೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಸಲ್ಲಿಸಬೇಕು.
4. **ವಿದ್ಯಾರ್ಹತೆಃ** ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿ 1977ರ ಪ್ರಕಾರ ಅಭ್ಯರ್ಥಿಗಳು ನೇರ ನೇಮಕಾತಿಗೆ ಅರ್ಹತೆಯನ್ನು ಪಡೆದಿರಬೇಕು ಹಾಗೂ ಅವನು ಕೆಳಗೆ ತಿಳಿಸಿರುವ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು.

ಕ್ರ.ಸಂ.	ಹುದ್ದೆಯ ಹೆಸರು	ವಿದ್ಯಾರ್ಹತೆ
1	ವಾಹನ ಚಾಲಕ	1. 7ನೇ ತರಗತಿಯಲ್ಲಿ ಉತ್ತೀರ್ಣರಾಗಿರಬೇಕು. 2. ಇತ್ತೀಚಿನ ವಾಹನ ಚಾಲನೆ ಪರವಾನಿಗೆ ಹೊಂದಿರಬೇಕು. 3. ಮೋಟಾರು ಕಾರು ಚಾಲನೆಯಲ್ಲಿ ಕನಿಷ್ಠ 3 ವರ್ಷಗಳ ಅನುಭವ ಹೊಂದಿರಬೇಕು.

5. **ವಯೋಮಿತಿಃ** ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳು ಕನಿಷ್ಠ 18 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು.

ಗರಿಷ್ಠ ವಯೋಮಿತಿಃ–

ಸಾಮಾನ್ಯ ವರ್ಗ	ಃ	35 ವರ್ಷ
ಪ್ರವರ್ಗ IIಎ, IIಬಿ, IIIಎ ಮತ್ತು IIIಬಿ	ಃ	38ವರ್ಷ
ಪ.ಜಾ/ಪ.ಪಂ/ಪ್ರವರ್ಗ–I	ಃ	40 ವರ್ಷ

6. ಸರ್ಕಾರಿ ಇಲಾಖೆಗಳಲ್ಲಿ ಈಗಾಗಲೇ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಅರ್ಜಿಗಳನ್ನು ತಮ್ಮ ನೇಮಕಾತಿ ಪ್ರಾಧಿಕಾರದ ಮೂಲಕವೇ ನಿಗದಿತ ದಿನಾಂಕದೊಳಗೆ ಸಲ್ಲಿಸಬೇಕು.

7. ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿ 1977ರ ಪ್ರಕಾರ, ರಾಜ್ಯ ಸಿವಿಲ್ ಸೇವೆಗಳಲ್ಲಿ ಹುದ್ದೆಗಳಿಗೆ ನೇಮಕಾತಿ ಹೊಂದಲು ಅರ್ಹತೆ ಹೊಂದಿರುವ ಅಭ್ಯರ್ಥಿಗಳು ಮಾತ್ರ ನೇಮಕಾತಿಗೆ ಅರ್ಹರಾಗಿರುತ್ತಾರೆ.

8. (1) ಆಯ್ಕೆಯಾದ ಯಾವುದೇ ಅಭ್ಯರ್ಥಿಯು, ನೇಮಕಾತಿ ಪ್ರಾಧಿಕಾರಕ್ಕೆ ಅವನು ನೇಮಿಸಿರುವ ಕೆಲಸಕ್ಕೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ಯೋಗ್ಯವೆನಿಸಿದ ಹೊರತು ಅವನನ್ನು ಆ ಹುದ್ದೆಗೆ ನೇಮಿಸಲಾಗುವುದಿಲ್ಲ.

(2) ಸಕ್ಷಮ ನೇಮಕಾತಿ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೇ ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿಯು ನೇಮಕಾತಿಗೆ ಅರ್ಹರಾಗಿರುವುದಿಲ್ಲ.

9. ಯಾವುದೇ ವ್ಯಕ್ತಿಯು ತನ್ನ ಉಮೇದುವಾರಿಕೆ ಬಗ್ಗೆ ಅಧಿಕಾರಿಗಳು ಮತ್ತು ಅಧಿಕಾರೇತರರುಗಳಿಂದ ಯಾವುದೇ ರೀತಿಯ ಒತ್ತಡ ತಂದಲ್ಲಿ ಸದರಿ ಹುದ್ದೆಯ ನೇಮಕಾತಿಗೆ ಅರ್ಹನಾಗುವುದಿಲ್ಲ.

10. **ಶುಲ್ಕ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–I ಅಭ್ಯರ್ಥಿಗಳನ್ನು ಹೊರತುಪಡಿಸಿ ಉಳಿದ, ಸಾಮಾನ್ಯ ಮತ್ತು ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳು ಕ್ರಾಸ್ ಮಾಡಿದ ರೂ. 25.00 ರ ಇಂಡಿಯನ್ ಪೋಸ್ಟಲ್ ಆರ್ಡರ್‌ನ್ನು ಅರ್ಜಿ ಸಲ್ಲಿಸುವ ದಿನಾಂಕದ 15 ದಿನಗಳೊಳಗಿರುವಂತೆ ಖರೀದಿಸಿ, ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಸಚಿವಾಲಯ, ಮೊದಲನೆ ಮಹಡಿ, ವಿಧಾನಸೌಧ, ಬೆಂಗಳೂರು–560 233 ಈ ವಿಳಾಸಕ್ಕೆ ಪಾವತಿ ಮಾಡಬೇಕು. ಅರ್ಜಿ ಶುಲ್ಕವನ್ನು ಒಮ್ಮೆ ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ.

11. ಅಭ್ಯರ್ಥಿಗಳು ಅರ್ಜಿಯೊಂದಿಗೆ ಈ ಕೆಳಗೆ ತಿಳಿಸಲಾಗಿರುವ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ದ್ವಿಪ್ರತಿಗಳಲ್ಲಿ ತಪ್ಪದೇ ಲಗತ್ತಿಸಬೇಕು.

(ಅ) ಹುಟ್ಟಿದ ತಾರೀಖಿಗೆ ಆಧಾರದ ದಾಖಲೆ ಪ್ರತಿ.

(ಆ) ಹುದ್ದೆಗೆ ಸೂಚಿಸಲಾಗಿರುವ 7ನೇ ತರಗತಿಯ ಉತ್ತೀರ್ಣತೆಯ ವಿದ್ಯಾರ್ಹತೆಯ ಅಂಕಪಟ್ಟಿ ಹಾಗೂ ವಾಹನ ಚಾಲನೆ 3 ವರ್ಷಗಳ ಅನುಭವ ಪ್ರಮಾಣ ಪತ್ರಗಳ ನಕಲು ಪ್ರತಿ (ಅಂಕಪಟ್ಟಿಗಳ ನಕಲು ಪ್ರತಿಗಳ ಸಮೇತ).

(ಇ) ಅರ್ಜಿ ನಮೂನೆಯಲ್ಲಿ ನಿಗದಿಪಡಿಸಿರುವಂತೆ ನಡತೆಯ(Conduct) ಬಗ್ಗೆ ಇಬ್ಬರು ಗಣ್ಯ ವ್ಯಕ್ತಿಗಳಿಂದ ಇತ್ತೀಚಿನ ಪ್ರಮಾಣ ಪತ್ರಗಳು.

(ಈ) ಜಾತಿ ಪ್ರಮಾಣ ಪತ್ರದ ನಕಲು ಪ್ರತಿಯನ್ನು ಸರ್ಕಾರದಿಂದ ನಿಗದಿಪಡಿಸಿರುವ ನಮೂನೆಯಲ್ಲಿ ಸಲ್ಲಿಸತಕ್ಕದ್ದು.

(ಉ) 1 ರಿಂದ 7ನೇ ತರಗತಿಯವರೆಗೆ ಕನ್ನಡ/ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿದ್ದಕ್ಕಾಗಿ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ.

(ಊ) ಯೋಜನೆಗಳಿಂದ ನಿರಾಶ್ರಿತಗೊಂಡಿದ್ದಕ್ಕೆ ಸಂಬಂಧಪಟ್ಟ ಜಿಲ್ಲಾಧಿಕಾರಿ/ತಹಸೀಲ್ದಾರರಿಂದ ಪಡೆದ ದೃಢೀಕರಣ ಪತ್ರ

ಸೂಚನೆಃ– ಅಭ್ಯರ್ಥಿಗಳು ಮೂಲ ಪ್ರಮಾಣ ಪತ್ರಗಳನ್ನು ಲಗತ್ತಿಸಬಾರದು.

12. ಅರ್ಜಿಗಳನ್ನು ನಮೂನೆ 1 ರ ದ್ವಿಪ್ರತಿಯಲ್ಲಿ ಅಗತ್ಯವುಳ್ಳ ದಾಖಲೆಗಳನ್ನು ಲಗತ್ತಿಸಿ, ಕೊನೆಯ ದಿನಾಂಕ : 17.03.2012ರಂದು ಸಂಜೆ 4–00 ಗಂಟೆಯ ಒಳಗಾಗಿ ಖುದ್ದಾಗಿ ಅಥವಾ ಅಂಚೆಯ ಮೂಲಕ ತಲುಪಿಸತಕ್ಕದ್ದು, ಸದರಿ ದಿನಾಂಕವು ಸಾರ್ವಜನಿಕ ರಜಾ ದಿನವಾದಲ್ಲಿ ಮುಂದಿನ ಕೆಲಸದ ದಿನದಂದು ಅರ್ಜಿಯನ್ನು ಸಲ್ಲಿಸತಕ್ಕದ್ದು.

13. ಕರ್ನಾಟಕ ವಿಧಾನಸಭೆ ಸಚಿವಾಲಯದ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಾವಳಿ 2003ರ ರೀತ್ಯಾ ವಾಹನ ಚಾಲಕರ ಹುದ್ದೆಯ ಆಯ್ಕೆ ಪ್ರಕ್ರಿಯೆಯ ಕಾರ್ಯ ವಿಧಾನವನ್ನು ನಿಗದಿಪಡಿಸುವ ಅಧಿಕಾರ ಮಾನ್ಯ ಸಭಾಧ್ಯಕ್ಷರವರಿಗೆ ಇರುತ್ತದೆ.

ವಿಶೇಷ ಸೂಚನೆ:

1. ಅರ್ಜಿಗಳ ಮೇಲೆ ಹುದ್ದೆಯ ಹೆಸರನ್ನು ಹಾಗೂ ಅರ್ಜಿದಾರರ ಹೆಸರು, ತಂದೆಯ ಹೆಸರು ಮತ್ತು ಸರಿಯಾದ ವಿಳಾಸವನ್ನು ದಪ್ಪ ಅಕ್ಷರಗಳಲ್ಲಿ ನಮೂದಿಸತಕ್ಕದ್ದು.
2. ಅರ್ಜಿಯನ್ನು ಸಲ್ಲಿಸಲು ನೀಡಿರುವ ಕಾಲಾವಧಿಯು ಸರ್ಕಾರಿ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಸೇರಿದಂತೆ ಎಲ್ಲಾ ಅಭ್ಯರ್ಥಿಗಳಿಗೂ ಅನ್ವಯವಾಗುವುದು.
3. ಅಗತ್ಯ ಪ್ರಮಾಣ ಪತ್ರಗಳನ್ನು ಲಗತ್ತಿಸದೆ ಇರುವ, ಲೋಪ/ಅಪೂರ್ಣ ಅರ್ಜಿಗಳನ್ನು ಹಾಗೂ ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
4. ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಿದ ನಂತರ ಆ ಸಂಬಂಧ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

ಸಭಾಧ್ಯಕ್ಷರ ಆದೇಶಾನುಸಾರ,

ಕೆ. ನೂರ್ ಮಹಮದ್
ಉಪ ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆಯ ಸಚಿವಾಲಯ

ವಿಶೇಷ ಪತ್ರಿಕೆ

ಭಾಗ – V	ಬೆಂಗಳೂರು, ಶುಕ್ರವಾರ, ಫೆಬ್ರವರಿ ೧೭, ೨೦೧೨ (ಮಾಘ ೨೮, ಶಕ ವರ್ಷ ೧೯೩೩)	ನಂ. ೧೨೧

ಕರ್ನಾಟಕ ವಿಧಾನ ಸಭೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ : ಕವಿಸಸ/ಆ–1/27/ಸ್ವಾ.ವಾ.ಮೇ.ನೇ.ನೇ./2012, ಬೆಂಗಳೂರು, ದಿನಾಂಕ: 17.02.2012

ವಿಷಯ : ಕರ್ನಾಟಕ ವಿಧಾನ ಸಭೆ ಸಚಿವಾಲಯದಲ್ಲಿ ಸ್ವಾಗತಕಾರರು ಹಾಗೂ ವಾಹನ ಮೇಲ್ವಿಚಾರಕರ ಹುದ್ದೆಗಳನ್ನು ನೇರ ನೇಮಕಾತಿಯ ಮೂಲಕ ಭರ್ತಿ ಮಾಡುವ ಬಗ್ಗೆ.

ಕರ್ನಾಟಕ ವಿಧಾನ ಸಭೆ ಸಚಿವಾಯದ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳು 2003 ಹಾಗೂ ತಿದ್ದುಪಡಿ ನಿಯಮಾವಳಿ 2012ರಡಿಯಲ್ಲಿ ಕರ್ನಾಟಕ ವಿಧಾನಸಭೆ ಸಚಿವಾಲಯದ ಸ್ವಾಗತಕಾರರು ಹಾಗೂ ವಾಹನ ಮೇಲ್ವಿಚಾರಕರ ಹುದ್ದೆಗಳಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಹುದ್ದೆಗಳ ವಿವರಗಳು ಈ ಕೆಳಕಂಡಂತಿರುತ್ತವೆ.

ಹುದ್ದೆಯ ಹೆಸರು : ಸ್ವಾಗತಕಾರರು

ಹುದ್ದೆಗಳ ಸಂಖ್ಯೆ : 17 ಹುದ್ದೆಗಳು

ವೇತನ ಶ್ರೇಣಿ : ರೂ. 5800–100–6000–125–6500–150–7100–175–7800–200–8600–225–9500–250–10500

	ಮೀಸಲಾತಿ ವರ್ಗೀಕರಣ	ಸಮತಳ ಮೀಸಲಾತಿ ವರ್ಗೀಕರಣ				
ಕ್ರ. ಸಂ.	ಮೀಸಲಾತಿ	ಸಾಮಾನ್ಯ ಅರ್ಹತೆ	ಗ್ರಾಮೀಣ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಖಾಲಿ ಇರುವ ಒಟ್ಟು ಹುದ್ದೆಗಳ ಸಂಖ್ಯೆ
1.	ಪ.ಜಾ.	01	01	01	––	03
2.	ಸಾಮಾನ್ಯ	02	02	03	01	08
3.	ಪ.ಪಂ.	01	––	––		01

	ಮೀಸಲಾತಿ ವರ್ಗೀಕರಣ	ಸಮತಳ ಮೀಸಲಾತಿ ವರ್ಗೀಕರಣ				
ಕ್ರ ಸಂ.	ಮೀಸಲಾತಿ	ಸಾಮಾನ್ಯ ಅರ್ಹತೆ	ಗ್ರಾಮೀಣ ಅಭ್ಯರ್ಥಿ	ಮಹಿಳಾ ಅಭ್ಯರ್ಥಿ	ಅಂಗವಿಕಲ ಅಭ್ಯರ್ಥಿ	ಖಾಲಿ ಇರುವ ಒಟ್ಟು ಹುದ್ದೆಗಳ ಸಂಖ್ಯೆ
4.	ಪ್ರವರ್ಗ–I	01	––	––	––	01
5.	II ಎ	01	––	01	––	02
6.	IIಬಿ	01	––	––	––	01
7.	IIIಎ	01	––		––	01

ಹುದ್ದೆಯ ಹೆಸರು : ವಾಹನ ಮೇಲ್ವಿಚಾರಕರು

ಹುದ್ದೆಗಳ ಸಂಖ್ಯೆ : **04 ಹುದ್ದೆಗಳು**

ವೇತನ ಶ್ರೇಣಿ : **ರೂ.5800–100–6000–125–6500–150–7100–175–7800–200–8600–225–9500–250–10500**

	ಮೀಸಲಾತಿ ವರ್ಗೀಕರಣ	ಸಮತಳ ಮೀಸಲಾತಿ ವರ್ಗೀಕರಣ		
ಕ್ರ. ಸಂ.	ಮೀಸಲಾತಿ	ಸಾಮಾನ್ಯ ಅರ್ಹತೆ	ಮಹಿಳಾ ಅಭ್ಯರ್ಥಿ	ಖಾಲಿ ಇರುವ ಒಟ್ಟು ಹುದ್ದೆಗಳ ಸಂಖ್ಯೆ
1.	ಪ.ಜಾ.	01	––	01
2.	ಸಾಮಾನ್ಯ	01	01	02
3.	ಪ.ಪಂ.	01		01

1. **ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 17.03.2012**
2. ಅರ್ಜಿ ಸಲ್ಲಿಸಬೇಕಾದ ವಿಳಾಸಃ ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಸಚಿವಾಲಯ, ಅಂಚೆ ಪೆಟ್ಟಿಗೆ ಸಂಖ್ಯೆ: 5074, ಮೊದಲನೆ ಮಹಡಿ, ವಿಧಾನ ಸೌಧ, ಬೆಂಗಳೂರು–560 233.
3. ಕರ್ನಾಟಕ ವಿಧಾನ ಸಭೆ ಸಚಿವಾಲಯದ (ನೇಮಕಾತಿ ಹಾಗೂ ಸೇವಾ ಷರತ್ತುಗಳು) ನಿಯಮಾವಳಿಗಳನುಸಾರ ಮೇಲ್ಕಂಡ ಹುದ್ದೆಗಳ ಭರ್ತಿಗಾಗಿ ಅರ್ಹತೆಯುಳ್ಳ ಅಭ್ಯರ್ಥಿಗಳು ಅರ್ಜಿ ನಮೂನೆ–1ರ ದ್ವಿಪ್ರತಿಯಲ್ಲಿ ಅರ್ಜಿಗಳನ್ನು ಸರ್ಕಾರಿ ಪುಸ್ತಕ ಮಳಿಗೆಯಿಂದ ಪಡೆದು ವಿಧಾನಸಭೆ ಸಚಿವಾಲಯಕ್ಕೆ ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕದೊಳಗೆ ಸಲ್ಲಿಸಬೇಕು.
4. **ವಿದ್ಯಾರ್ಹತೆಃ** ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ)ನಿಯಮಾವಳಿ 1977ರ ಪ್ರಕಾರ ಅಭ್ಯರ್ಥಿಗಳು ನೇರ ನೇಮಕಾತಿಗೆ ಅರ್ಹತೆಯನ್ನು ಪಡೆದಿರಬೇಕು ಹಾಗೂ ಅವನು ಕೆಳಗೆ ತಿಳಿಸಿರುವ ವಿದ್ಯಾರ್ಹತೆಯನ್ನು ಹೊಂದಿರತಕ್ಕದ್ದು.

ಕ್ರ. ಸಂ.	ಹುದ್ದೆಯ ಹೆಸರು	ವಿದ್ಯಾರ್ಹತೆ
1	ಸ್ವಾಗತಕಾರರು	1. ಮಾನ್ಯತೆ ಪಡೆದಿರುವ ವಿಶ್ವವಿದ್ಯಾಲಯದಿಂದ ಪದವಿ ಹೊಂದಿರಬೇಕು. 2. ಗಣಕ ಯಂತ್ರದ ಸಾಮಾನ್ಯ ಜ್ಞಾನವನ್ನು (ಮಾನ್ಯತೆ ಪಡೆದ ಸಂಸ್ಥೆಯಿಂದ ಗಣಕ ಯಂತ್ರದ ಕನಿಷ್ಠ 6 ತಿಂಗಳುಗಳ ತರಬೇತಿ) ಹೊಂದಿರಬೇಕು.
2	ವಾಹನ ಮೇಲ್ವಿಚಾರಕರು	ಮಾನ್ಯತೆ ಪಡೆದಿರುವ ವಿಶ್ವವಿದ್ಯಾಲಯ/ಮಂಡಳಿಯಿಂದ ಆಟೋಮೊಬೈಲ್ ಇಂಜಿನಿಯರಿಂಗ್‌ನಲ್ಲಿ ಡಿಪ್ಲೊಮೋ ಪದವಿ ಹೊಂದಿರಬೇಕು.

5. **ವಯೋಮಿತಿಃ** ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕದಂದು ಅಭ್ಯರ್ಥಿಗಳು ಕನಿಷ್ಠ 18 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು.

ಗರಿಷ್ಠ ವಯೋಮಿತಿಃ–

ಸಾಮಾನ್ಯ ವರ್ಗ : 35 ವರ್ಷ

ಪ್ರವರ್ಗ IIಎ, IIಬಿ, IIIಎ ಮತ್ತು IIIಬಿ : 38ವರ್ಷ

ಪ.ಜಾ/ಪ.ಪಂ/ಪ್ರವರ್ಗ–I : 40 ವರ್ಷ

6. ಸರ್ಕಾರಿ ಇಲಾಖೆಗಳಲ್ಲಿ ಈಗಾಗಲೇ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಅರ್ಜಿಗಳನ್ನು ತಮ್ಮ ನೇಮಕಾತಿ ಪ್ರಾಧಿಕಾರದ ಮೂಲಕವೇ ನಿಗದಿತ ದಿನಾಂಕದೊಳಗೆ ಸಲ್ಲಿಸಬೇಕು.

7. ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಾವಳಿ 1977ರ ಪ್ರಕಾರ, ರಾಜ್ಯ ಸಿವಿಲ್ ಸೇವೆಗಳಲ್ಲಿ ಹುದ್ದೆಗಳಿಗೆ ನೇಮಕಾತಿ ಹೊಂದಲು ಅರ್ಹತೆ ಹೊಂದಿರುವ ಅಭ್ಯರ್ಥಿಗಳು ಮಾತ್ರ ನೇಮಕಾತಿಗೆ ಅರ್ಹರಾಗಿರುತ್ತಾರೆ.

8. (1) ಆಯ್ಕೆಯಾದ ಯಾವುದೇ ಅಭ್ಯರ್ಥಿಯು, ನೇಮಕಾತಿ ಪ್ರಾಧಿಕಾರಕ್ಕೆ ಅವನು/ಅವಳು ನೇಮಿಸಿರುವ ಕೆಲಸಕ್ಕೆ ದೈಹಿಕವಾಗಿ ಹಾಗೂ ಮಾನಸಿಕವಾಗಿ ಯೋಗ್ಯವೆನಿಸಿದ ಹೊರತು ಅವನನ್ನು/ಅವಳನ್ನು ಆ ಹುದ್ದೆಗೆ ನೇಮಿಸಲಾಗುವುದಿಲ್ಲ.

(2) ಸಕ್ಷಮ ನೇಮಕಾತಿ ಪ್ರಾಧಿಕಾರದ ಪೂರ್ವಾನುಮತಿ ಪಡೆಯದೇ ಒಬ್ಬ ಜೀವಂತ ಪತ್ನಿಗಿಂತ ಹೆಚ್ಚು ಮಂದಿ ಪತ್ನಿಯರನ್ನು ಹೊಂದಿರುವ ಪುರುಷ ಅಭ್ಯರ್ಥಿ ಮತ್ತು ಈಗಾಗಲೇ ಇನ್ನೊಬ್ಬ ಹೆಂಡತಿ ಇರುವ ವ್ಯಕ್ತಿಯನ್ನು ಮದುವೆಯಾಗಿರುವ ಮಹಿಳಾ ಅಭ್ಯರ್ಥಿಯು ನೇಮಕಾತಿಗೆ ಅರ್ಹರಾಗಿರುವುದಿಲ್ಲ.

9. ಯಾವುದೇ ವ್ಯಕ್ತಿಯು ತನ್ನ ಉಮೇದುವಾರಿಕೆ ಬಗ್ಗೆ ಅಧಿಕಾರಿಗಳು ಮತ್ತು ಅಧಿಕಾರೇತರರುಗಳಿಂದ ಯಾವುದೇ ರೀತಿಯ ಒತ್ತಡ ತಂದಲ್ಲಿ ಸದರಿ ಹುದ್ದೆಯ ನೇಮಕಾತಿಗೆ ಅರ್ಹನಾಗುವುದಿಲ್ಲ.

10. **ಶುಲ್ಕ:** ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಪ್ರವರ್ಗ–I ಅಭ್ಯರ್ಥಿಗಳನ್ನು ಹೊರತುಪಡಿಸಿ ಉಳಿದ, ಸಾಮಾನ್ಯ ಮತ್ತು ಇತರೆ ಹಿಂದುಳಿದ ವರ್ಗದ ಅಭ್ಯರ್ಥಿಗಳು ಕ್ರಾಸ್ ಮಾಡಿದ ರೂ.25.00ರ ಇಂಡಿಯನ್ ಪೋಸ್ಟಲ್ ಆರ್ಡರ್‌ನ್ನು ಅರ್ಜಿ ಸಲ್ಲಿಸುವ ದಿನಾಂಕದ 15 ದಿನಗಳೊಳಗಿರುವಂತೆ ಖರೀದಿಸಿ, ಕಾರ್ಯದರ್ಶಿ, ಕರ್ನಾಟಕ ವಿಧಾನ ಸಭೆ ಸಚಿವಾಲಯ, ಮೊದಲನೆ ಮಹಡಿ, ವಿಧಾನಸೌಧ, ಬೆಂಗಳೂರು–560 233 ಈ ವಿಳಾಸಕ್ಕೆ ಪಾವತಿ ಮಾಡಬೇಕು. ಅರ್ಜಿ ಶುಲ್ಕವನ್ನು ಒಮ್ಮೆ ಪಾವತಿಸಿದ ನಂತರ ಅದನ್ನು ಯಾವುದೇ ಸಂದರ್ಭದಲ್ಲಿಯೂ ಹಿಂದಿರುಗಿಸಲಾಗುವುದಿಲ್ಲ.

11. ಅಭ್ಯರ್ಥಿಗಳು ಅರ್ಜಿಯೊಂದಿಗೆ ಈ ಕೆಳಗೆ ತಿಳಿಸಲಾಗಿರುವ ದಾಖಲೆಗಳ ಜೆರಾಕ್ಸ್ ಪ್ರತಿಗಳನ್ನು ದ್ವಿಪ್ರತಿಗಳಲ್ಲಿ ತಪ್ಪದೇ ಲಗತ್ತಿಸಬೇಕು.

ಸ್ವಾಗತಕಾರರ ಹುದ್ದೆ :

(ಅ) ಹುಟ್ಟಿದ ತಾರೀಖಿಗೆ ಆಧಾರದ ದಾಖಲೆ ಪ್ರತಿ.

(ಆ) ಪದವಿ ವಿದ್ಯಾರ್ಹತೆಗೆ ಸಂಬಂಧಿಸಿದಂತೆ ಮಾನ್ಯತೆ ಹೊಂದಿದ ವಿಶ್ವವಿದ್ಯಾನಿಲಯದಿಂದ ಪಡೆದ ಪದವಿ ಪ್ರಮಾಣ ಪತ್ರ ಹಾಗೂ ಅಂಕಪಟ್ಟಿಗಳ ನಕಲು ಪ್ರತಿಗಳೊಂದಿಗೆ.

(ಇ) ಮಾನ್ಯತೆ ಪಡೆದ ಸಂಸ್ಥೆಯಿಂದ ಗಣಕಯಂತ್ರದ ಕನಿಷ್ಠ 6 ತಿಂಗಳುಗಳ ತರಬೇತಿ ಹೊಂದಿದ ಪ್ರಮಾಣ ಪತ್ರದ ನಕಲು ಪ್ರತಿ

(ಈ) ಅರ್ಜಿ ನಮೂನೆಯಲ್ಲಿ ನಿಗದಿಪಡಿಸಿರುವಂತೆ ನಡತೆಯ (Conduct) ಬಗ್ಗೆ ಇಬ್ಬರು ಗಣ್ಯ ವ್ಯಕ್ತಿಗಳಿಂದ ಪಡೆದ ಇತ್ತೀಚಿನ ಪ್ರಮಾಣ ಪತ್ರಗಳು.

(ಉ) ಜಾತಿ ಪ್ರಮಾಣ ಪತ್ರದ ನಕಲು ಪ್ರತಿಯನ್ನು ಸರ್ಕಾರದಿಂದ ನಿಗದಿಪಡಿಸಿರುವ ನಮೂನೆಯಲ್ಲಿ ಸಲ್ಲಿಸತಕ್ಕದ್ದು.

(ಊ) 1 ರಿಂದ 10ನೇ ತರಗತಿಯವರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿದ್ದಕ್ಕಾಗಿ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ.

ವಾಹನ ಮೇಲ್ವಿಚಾರಕರ ಹುದ್ದೆ:

(ಅ) ಹುಟ್ಟಿದ ತಾರೀಖಿಗೆ ಆಧಾರದ ದಾಖಲೆ ಪ್ರತಿ.

(ಆ) ಮಾನ್ಯತೆ ಪಡೆದ ವಿಶ್ವವಿದ್ಯಾನಿಲಯ/ಮಂಡಳಿಯಿಂದ ಆಟೋಮೊಬೈಲ್ ಇಂಜಿನಿಯರಿಂಗ್ ಡಿಪ್ಲೊಮೋ ಪದವಿ ಹೊಂದಿದ ಪ್ರಮಾಣ ಪತ್ರ ಹಾಗೂ ಅಂಕಪಟ್ಟಿಗಳ ನಕಲು ಪ್ರತಿಗಳೊಂದಿಗೆ.

(ಇ) ಅರ್ಜಿ ನಮೂನೆಯಲ್ಲಿ ನಿಗದಿಪಡಿಸಿರುವಂತೆ ನಡತೆಯ(Conduct) ಬಗ್ಗೆ ಇಬ್ಬರು ಗಣ್ಯ ವ್ಯಕ್ತಿಗಳಿಂದ ಪಡೆದ ಇತ್ತೀಚಿನ ಪ್ರಮಾಣ ಪತ್ರಗಳು.

(ಈ) ಜಾತಿ ಪ್ರಮಾಣ ಪತ್ರದ ನಕಲು ಪ್ರತಿಯನ್ನು ಸರ್ಕಾರದಿಂದ ನಿಗದಿಪಡಿಸಿರುವ ನಮೂನೆಯಲ್ಲಿ ಸಲ್ಲಿಸತಕ್ಕದ್ದು.

(ಉ) 1 ರಿಂದ 10ನೇ ತರಗತಿಯವರೆಗೆ ಗ್ರಾಮಾಂತರ ಪ್ರದೇಶಗಳಲ್ಲಿ ವ್ಯಾಸಂಗ ಮಾಡಿದ್ದಕ್ಕಾಗಿ ಸಂಬಂಧಪಟ್ಟ ಕ್ಷೇತ್ರ ಶಿಕ್ಷಣಾಧಿಕಾರಿಗಳಿಂದ ಪಡೆದ ದೃಢೀಕರಣ ಪತ್ರ.

ಸೂಚನೆ:– ಅಭ್ಯರ್ಥಿಗಳು ಮೂಲ ಪ್ರಮಾಣ ಪತ್ರಗಳನ್ನು ಲಗತ್ತಿಸಬಾರದು.

12. ಅರ್ಜಿಗಳನ್ನು ನಮೂನೆ–1ರ ದ್ವಿಪ್ರತಿಯಲ್ಲಿ ಅಗತ್ಯವುಳ್ಳ ದಾಖಲೆಗಳನ್ನು ಲಗತ್ತಿಸಿ, ಕೊನೆಯ ದಿನಾಂಕ : 17.03.2012ರಂದು ಸಂಜೆ 4–00 ಗಂಟೆಯ ಒಳಗಾಗಿ ಖುದ್ದಾಗಿ ಅಥವಾ ಅಂಚೆಯ ಮೂಲಕ ತಲುಪಿಸತಕ್ಕದ್ದು, ಸದರಿ ದಿನಾಂಕವು ಸಾರ್ವಜನಿಕ ರಜಾ ದಿನವಾದಲ್ಲಿ ಮುಂದಿನ ಕೆಲಸದ ದಿನದಂದು ಅರ್ಜಿಯನ್ನು ಸಲ್ಲಿಸತಕ್ಕದ್ದು.

13. ಕರ್ನಾಟಕ ವಿಧಾನಸಭೆ ಸಚಿವಾಲಯದ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಾವಳಿ 2003ರ ರೀತ್ಯಾ ಹುದ್ದೆಗಳ ಆಯ್ಕೆ ಪ್ರಕ್ರಿಯೆಯ ಕಾರ್ಯ ವಿಧಾನವನ್ನು ನಿಗದಿಪಡಿಸುವ ಅಧಿಕಾರ ಮಾನ್ಯ ಸಭಾಧ್ಯಕ್ಷರವರಿಗೆ ಇರುತ್ತದೆ.

ವಿಶೇಷ ಸೂಚನೆ:

1. ಅರ್ಜಿಗಳ ಮೇಲೆ ಹುದ್ದೆಯ ಹೆಸರನ್ನು ಹಾಗೂ ಅರ್ಜಿದಾರರ ಹೆಸರು, ತಂದೆಯ ಹೆಸರು ಮತ್ತು ಸರಿಯಾದ ವಿಳಾಸವನ್ನು ದಪ್ಪ ಅಕ್ಷರಗಳಲ್ಲಿ ನಮೂದಿಸತಕ್ಕದ್ದು.
2. ಅರ್ಜಿಯನ್ನು ಸಲ್ಲಿಸಲು ನೀಡಿರುವ ಕಾಲಾವಧಿಯು ಸರ್ಕಾರಿ ಇಲಾಖೆಗಳಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಸೇರಿದಂತೆ ಎಲ್ಲಾ ಅಭ್ಯರ್ಥಿಗಳಿಗೂ ಅನ್ವಯವಾಗುವುದು.
3. ಅಗತ್ಯ ಪ್ರಮಾಣ ಪತ್ರಗಳನ್ನು ಲಗತ್ತಿಸದೆ ಇರುವ, ಲೋಪ/ಅಪೂರ್ಣ ಅರ್ಜಿಗಳನ್ನು ಹಾಗೂ ನಿಗದಿತ ದಿನಾಂಕದ ನಂತರ ಬಂದ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
4. ಅಭ್ಯರ್ಥಿಗಳು ಅರ್ಜಿಯನ್ನು ಸಲ್ಲಿಸಿದ ನಂತರ ಆ ಸಂಬಂಧ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.

ಸಭಾಧ್ಯಕ್ಷರ ಆದೇಶಾನುಸಾರ,

ಕೆ. ನೂರ್ ಮಹಮದ್
ಉಪ ಕಾರ್ಯದರ್ಶಿ,
ಕರ್ನಾಟಕ ವಿಧಾನ ಸಭೆಯ ಸಚಿವಾಲಯ

ವಿಶೇಷ ಪತ್ರಿಕೆ

ಭಾಗ – **IV-A**	ಬೆಂಗಳೂರು, ಬುಧವಾರ, ಫೆಬ್ರವರಿ ೧೫, ೨೦೧೨ (ಮಾಘ ೨೬, ಶಕ ವರ್ಷ ೧೯೩೩)	ನಂ. ೧೧೩

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 04 ಇಕಾಅ 2012, ಬೆಂಗಳೂರು, ದಿನಾಂಕ: 14ನೇ ಫೆಬ್ರವರಿ, 2012

ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ, 2011ರ (2012ರ ಕರ್ನಾಟಕ ಅಧಿನಿಯಮ 1) 19ನೇ ಪ್ರಕರಣದ ಮೂಲಕ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ, ಕರ್ನಾಟಕ ಸರ್ಕಾರವು ರಚಿಸಲು ಉದ್ದೇಶಿಸಿರುವ ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ನಿಯಮಗಳು, 2012ರ ಕರಡನ್ನು ಸದರಿ ಪ್ರಕರಣದ (1)ನೇ ಉಪಪ್ರಕರಣದ ಮೂಲಕ ಅಗತ್ಯಪಡಿಸಲಾದಂತೆ, ಅದರಿಂದ ಬಾಧಿತರಾಗುವ ಸಂಭವವಿರುವ ವ್ಯಕ್ತಿಗಳ ಮಾಹಿತಿಗಾಗಿ ಈ ಮೂಲಕ ಪ್ರಕಟಿಸಲಾಗಿದೆ ಮತ್ತು ಸದರಿ ಕರಡನ್ನು ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಿಸಿದ ದಿನಾಂಕದಿಂದ **ಹದಿನೈದು ದಿನಗಳು** ಮುಕ್ತಾಯವಾದ ತರುವಾಯ ಪರಿಗಣನೆಗೆ ತೆಗೆದುಕೊಳ್ಳಲಾಗುವುದೆಂದು ಈ ಮೂಲಕ ತಿಳಿಸಲಾಗಿದೆ.

ಮೇಲೆ ನಿರ್ದಿಷ್ಟಪಡಿಸಿದ ಅವಧಿಯು ಮುಕ್ತಾಯವಾಗುವುದರೊಳಗೆ ಸದರಿ ಕರಡಿನ ಸಂಬಂಧದಲ್ಲಿ ಯಾವುದೇ ವ್ಯಕ್ತಿಯಿಂದ ರಾಜ್ಯ ಸರ್ಕಾರವು ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆ ಅಥವಾ ಸಲಹೆಯನ್ನು ರಾಜ್ಯ ಸರ್ಕಾರವು ಪರಿಗಣಿಸುವುದು. ಆಕ್ಷೇಪಣೆಗಳು ಮತ್ತು ಸಲಹೆಗಳನ್ನು ಸರ್ಕಾರದ ಪ್ರದಾನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆಗಳ ಇಲಾಖೆ (ಆಡಳಿತ ಸುಧಾರಣೆ), 6ನೇ ಮಹಡಿ, 2ನೇ ಹಂತ, ಬಹುಮಹಡಿಗಳ ಕಟ್ಟಡ, ಡಾ: ಅಂಬೇಡ್ಕರ್ ವೀದಿ, ಬೆಂಗಳೂರು – 560001 ಈ ವಿಳಾಸಕ್ಕೆ ಕಳುಹಿಸಬಹುದು.

ಕರಡು ನಿಯಮಗಳು

1. ಹೆಸರು ಮತ್ತು ಪ್ರಾರಂಭ.– (1) ಈ ನಿಯಮಗಳನ್ನು ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ನಿಯಮಗಳು, 2012 ಎಂದು ಕರೆಯತಕ್ಕದ್ದು.

(2) ಇವುಗಳು ರಾಜ್ಯಪತ್ರದಲ್ಲಿ ಪ್ರಕಟವಾದ ದಿನಾಂಕದಿಂದ ಜಾರಿಗೆ ಬರತಕ್ಕದ್ದು.

2. ಪರಿಭಾಷೆಗಳು.– (1) ಈ ನಿಯಮಗಳಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) 'ಅಧಿನಿಯಮ' ಎಂದರೆ, ಕರ್ನಾಟಕ ನಾಗರಿಕರಿಗೆ ಸೇವೆಗಳ ಖಾತರಿ ಅಧಿನಿಯಮ, 2011 (2012ರ ಕರ್ನಾಟಕ ಅಧಿನಿಯಮ 1);

(ಬಿ) 'ನಮೂನೆ' ಎಂದರೆ ಈ ನಿಯಮಗಳಿಗೆ ಲಗತ್ತಾದ ನಮೂನೆ;

(ಸಿ) 'ಪ್ರಕರಣ' ಎಂದರೆ ಅಧಿನಿಯಮದ ಪ್ರಕರಣ.

(2) ಈ ನಿಯಮಗಳಲ್ಲಿ ಬಳಸಲಾದ ಆದರೆ ಪರಿಭಾಷಿಸಿರದ ಪದಗಳು ಮತ್ತು ಪದಾವಳಿಗಳು ಅಧಿನಿಯಮದಲ್ಲಿ ಅವುಗಳಿಗೆ ಗೊತ್ತುಪಡಿಸಿದ ಅರ್ಥಗಳನ್ನು ಹೊಂದಿರತಕ್ಕದ್ದು.

3. ಸೂಚನಾ ಫಲಕದ ಮೇಲೆ ಮಾಹಿತಿಯನ್ನು ಪ್ರದರ್ಶಿಸುವುದು.– (1) ಸಾರ್ವಜನಿಕ ಪ್ರಾಧಿಕಾರದ ಹೆಸರಿಸಲಾದ ಅಧಿಕಾರಿ ಮತ್ತು ಆತನ ಅಧೀನ ಸಾರ್ವಜನಿಕ ನೌಕರನು, ಸಾಮಾನ್ಯ ಸಾರ್ವಜನಿಕ ಅನುಕೂಲಕ್ಕಾಗಿ, ತನ್ನ ಕಚೇರಿಯಲ್ಲಿ ಲಭ್ಯವಿರುವ ಸೇವೆಗಳ ಬಗೆಗಿನ ಎಲ್ಲಾ ಯುಕ್ತ ಮಾಹಿತಿಯನ್ನು ಅಧಿನಿಯಮದ ಷೆಡ್ಯೂಲ್‌ನಲ್ಲಿ ನಿಗದಿಪಡಿಸಿರುವಂತೆ ಮತ್ತು ಅರ್ಜಿಯ ನಮೂನೆಯನ್ನು ಸೂಚನಾಫಲಕದ ಮೇಲೆ ಪ್ರದರ್ಶಿಸುವಂತೆ ಮಾಡತಕ್ಕದ್ದು. ಅಧಿನಿಯಮದ 3ನೇ ಪ್ರಕರಣದ (2)ನೇ ಉಪಪ್ರಕರಣದನ್ವಯ ಸೇವೆಗಳನ್ನು ಸ್ವೀಕರಿಸುವುದಕ್ಕಾಗಿ ಅರ್ಜಿಯೊಂದಿಗೆ ಲಗತ್ತಿಸಬೇಕಾದ ಅಗತ್ಯತೆಯಿರುವ ಎಲ್ಲಾ ಅವಶ್ಯಕವಾದ ದಾಖಲೆಗಳನ್ನು ತಾಳೆ ಪಟ್ಟಿಯ ನಮೂನೆಯಲ್ಲಿ ಸೂಚನಾಫಲಕದ ಮೇಲೆ ಪ್ರದರ್ಶಿಸತಕ್ಕದ್ದು. ಮೇಲಿನ ವಿವರಗಳ ಜೊತೆಗೆ ಮಾಹಿತಿಯ ಪ್ರದರ್ಶನವು, ಒಂದು ಮೇಲ್ಮನವಿಯನ್ನು ಮಾಡಬೇಕಾದ ವಿಧಾನ, ಹಾಗೆಯೇ ಮೇಲ್ಮನವಿಗೆ ಲಗತ್ತಿಸತಕ್ಕ ಎಲ್ಲಾ ಅವಶ್ಯಕ ದಾಖಲೆಗಳ ಬಗ್ಗೆ ವಿವರಗಳನ್ನು ಸಹ ಒಳಗೊಂಡಿರತಕ್ಕದ್ದು.

(2) ಪ್ರತಿಯೊಬ್ಬ ಹೆಸರಿಸಲಾದ ಅಧಿಕಾರಿಯು, ಅರ್ಜಿದಾರನು ಮಾಡಿದ ಅರ್ಜಿಯ ಸ್ಥಿತಿಗತಿಯನ್ನು ಪಡೆದುಕೊಳ್ಳುವ ಮತ್ತು ನಿರ್ವಹಿಸುವ ವಿಧಾನವನ್ನು ಪ್ರದರ್ಶಿಸುವುದಕ್ಕೂ ಸಹ ಪ್ರಯತ್ನಿಸತಕ್ಕದ್ದು.

(3) ಸಾರ್ವಜನಿಕ ಆದಿಪತ್ಯದಲ್ಲಿ ಅಂಥ ಮಾಹಿತಿಯನ್ನು ಪ್ರದರ್ಶನ ಮಾಡಿರದ ಪ್ರಕರಣದಲ್ಲಿ, ಸಕ್ಷಮ ಅಧಿಕಾರಿಯು, ಹೆಸರಿಸಲಾದ ಅಧಿಕಾರಿಯ ವಿರುದ್ಧ ಯುಕ್ತವಾದ ಕ್ರಮವನ್ನು ಪ್ರಾರಂಭಿಸತಕ್ಕದ್ದು.

4. ಅರ್ಜಿಯನ್ನು ಸ್ವೀಕರಿಸುವ ಮತ್ತು ಅರ್ಜಿದಾರರಿಗೆ ಸ್ವೀಕೃತಿಯನ್ನು ನೀಡುವ ವಿಧಾನ:– (1) ಅನುಸೂಚಿಯಲ್ಲಿ ನಮೂದಿಸಿರುವ ಒಂದು ಅಥವಾ ಹೆಚ್ಚಿನ ಸೇವೆಗಳನ್ನು ಪಡೆಯಲು ಬಯಸುವ ನಾಗರೀಕರು ನಿಗದಿತ ಅರ್ಜಿ ನಮೂನೆಯಲ್ಲಿ ತಾಳೆಪಟ್ಟಿಯಲ್ಲಿ ಹೇಳಿರುವ ಎಲ್ಲಾ ದಾಖಲಾತಿಗಳೊಂದಿಗೆ ಹೆಸರಿಸಲಾದ ಅಧಿಕಾರಿಗೆ ಅರ್ಜಿಯನ್ನು ಸಲ್ಲಿಸಬಹುದಾಗಿದೆ.

(2) ಹೆಸರಿಸಲಾದ ಅಧಿಕಾರಿ ಅಥವಾ ಅಧಿಕೃತ ವ್ಯಕ್ತಿಯು, ಲಿಖಿತ ರೂಪದಲ್ಲಿ ಅಥವಾ ನಿಯಮಿಸಿದೆಡೆಯಲ್ಲಿ ಅಂಥ ನಮೂನೆಯಲ್ಲಿ, ಅರ್ಜಿಯನ್ನು ಸ್ವೀಕರಿಸಿದಾಗ, ನಮೂನೆ–ಎ ಯಲ್ಲಿ ಅರ್ಜಿದಾರನಿಗೆ ಯುಕ್ತ ಸ್ವೀಕೃತಿಯನ್ನು ನೀಡತಕ್ಕದ್ದು. ಪ್ರತಿಯೊಂದು ಅರ್ಜಿಗೆ ಒಂದು ಸ್ವೀಕೃತಿ ಸಂಖ್ಯೆಯನ್ನು ನೀಡತಕ್ಕದ್ದು.

(3) ಅರ್ಜಿಯೊಂದಿಗೆ ಯಾವುದೇ ಅವಶ್ಯಕ ದಸ್ತಾವೇಜುಗಳನ್ನು ಲಗತ್ತಿಸಿರದ ಸಂದರ್ಭದಲ್ಲಿ, ಅದನ್ನು ಸ್ವೀಕೃತಿಯಲ್ಲಿ ಸ್ಪಷ್ಟವಾಗಿ ನಮೂದಿಸತಕ್ಕದ್ದು ಮತ್ತು ಅಂಥ ಸ್ವೀಕೃತಿಗಳಲ್ಲಿ ಸೇವೆ ಒದಗಿಸುವ ದಿನಾಂಕವನ್ನು ನಮೂದಿಸತಕ್ಕದ್ದಲ್ಲ.

(4) ಅರ್ಜಿಯೊಂದಿಗೆ ಎಲ್ಲಾ ಅವಶ್ಯಕ ದಸ್ತಾವೇಜುಗಳನ್ನು ಲಗತ್ತಿಸಿದ್ದಲ್ಲಿ ಮತ್ತು ಅರ್ಜಿಯು ಎಲ್ಲಾ ವಿಧಗಳಲ್ಲಿಯೂ ಪೂರ್ಣವಾಗಿದ್ದಲ್ಲಿ, ಆಗ ಸೇವೆ ಒದಗಿಸುವ ದಿನಾಂಕವನ್ನು ನಮೂದಿಸತಕ್ಕದ್ದು.

5. ಸಾರ್ವಜನಿಕ ರಜಾ ದಿನಗಳನ್ನು ಒಳಗೊಂಡಿರತಕ್ಕದ್ದಲ್ಲ:– ಸೇವೆಯ ವಿಲೆಗಾಗಿ ಗೊತ್ತುಪಡಿಸಿದ ಕಾಲಮಿತಿಯನ್ನು ಲೆಕ್ಕಹಾಕುವಾಗ ಸಾರ್ವಜನಿಕ ರಜಾದಿನಗಳನ್ನು ಒಳಗೊಂಡಿರತಕ್ಕದ್ದಲ್ಲ.

6. ಪರಿಹಾರ ವೆಚ್ಚವನ್ನು ಕೋರುವ ಮತ್ತು ಪಾವತಿಮಾಡುವ ವಿಧಾನ:– (1) ನಾಗರಿಕ ಸಂಬಂಧಿ ಸೇವೆಗಳಿಗಾಗಿ ಅರ್ಜಿಯನ್ನು ಸಲ್ಲಿಸಿರುವ ನಾಗರಿಕನು, ಅರ್ಜಿದಾರರ ಹೆಸರು, ಅರ್ಜಿಯ ದಿನಾಂಕ ಮತ್ತು ಹೆಸರಿಸಲಾದ ಅಧಿಕಾರಿಯು ವಿಳಂಬ ಮಾಡಿದ ದಿನಗಳ ಸಂಖ್ಯೆ ಮತ್ತು ತಿರಸ್ಕರಿಸಲಾದ ಸೇವೆಗಳ ವಿವರಗಳನ್ನು ಸೂಚಿಸಿ, ಹೆಸರಿಸಲಾದ ಅಧಿಕಾರಿಯು ಅಧಿಸೂಚಿಸಿದ ಅಥವಾ ಪ್ರದರ್ಶಿಸಿದ ಅಡಕಗಳು, ಯಾವುದಾದರೂ ಇದ್ದಲ್ಲಿ, ಅವುಗಳೊಂದಿಗೆ ನಮೂನೆ–ಬಿನಲ್ಲಿ ಪರಿಹಾರದ ವೆಚ್ಚವನ್ನು ಕೋರುವುದಕ್ಕೆ ಹಕ್ಕುಳ್ಳವನಾಗಿರತಕ್ಕದ್ದು.

(2) ಸಕ್ಷಮ ಅಧಿಕಾರಿಯು, ಪರಿಹಾರದ ವೆಚ್ಚಕ್ಕಾಗಿನ ಅರ್ಜಿಯನ್ನು, ದಿನಾಂಕ ಮತ್ತು ಮೊಹರಿನೊಂದಿಗೆ, ಸ್ವೀಕರಿಸತಕ್ಕದ್ದು ಅಥವಾ ಸ್ವೀಕರಿಸುವಂತೆ ಮಾಡತಕ್ಕದ್ದು.

(3) ಪರಿಹಾರ ವೆಚ್ಚಕ್ಕಾಗಿನ ಅರ್ಜಿಯನ್ನು ಸ್ವೀಕರಿಸಿದ ತರುವಾಯ, ಅರ್ಜಿದಾರನು ಅರ್ಹನಾದ ಪರಿಹಾರ ವೆಚ್ಚವನ್ನು ಸಕ್ಷಮ ಅಧಿಕಾರಿಯು ಮೌಲ್ಯಮಾಪನ ಮಾಡತಕ್ಕದ್ದು ಮತ್ತು ಅದನ್ನು ಪಾವತಿ ಮಾಡುವುದಕ್ಕೆ ಅವಶ್ಯಕ ಕ್ರಮವನ್ನು ತೆಗೆದುಕೊಳ್ಳತಕ್ಕದ್ದು ಹಾಗೂ ನಾಗರೀಕನಿಗೆ ಪರಿಹಾರ ವೆಚ್ಚವನ್ನು 30 ದಿನಗಳೊಳಗೆ ಪಾವತಿಸುವುದನ್ನು ಖಚಿತಪಡಿಸಿಕೊಳ್ಳತಕ್ಕದ್ದು. ತದನಂತರ ಆತನು 11ನೇ ಪ್ರಕರಣದ ಅಡಿಯಲ್ಲಿ ಅನುಸೂಚಿಯಲ್ಲಿ ನಿಗದಿಪಡಿಸಿರುವ ಕಾಲಮಿತಿಯಲ್ಲಿ ತಪ್ಪಿತಸ್ಥ ಸಾರ್ವಜನಿಕ ನೌಕರನಿಂದ ಅದನ್ನು ವಸೂಲು ಮಾಡಲು ಕ್ರಮವಹಿಸತಕ್ಕದ್ದು.

7. ನೋಟೀಸನ್ನು ನೀಡುವ ವಿಧಾನ:– ಸಕ್ಷಮ ಅಧಿಕಾರಿಯು, ಪರಿಹಾರವನ್ನು ಪಾವತಿ ಮಾಡಿದ ಅರ್ಜಿಯ ಪ್ರತಿಯನ್ನು ಆತನಿಗೆ ಒದಗಿಸುವಲ್ಲಿ ವಿಳಂಬಕ್ಕೆ ಅಥವಾ ತಪ್ಪಿಗೆ ಹೊಣೆಗಾರನಾದ ಹೆಸರಿಸಲಾದ ಅಧಿಕಾರಿ ಅಥವಾ ಅಧೀನ ಸಿಬ್ಬಂದಿಗೆ ನೋಟೀಸನ್ನು ನೀಡತಕ್ಕದ್ದು ಮತ್ತು ಪಾವತಿ ಮಾಡಿದ ಪರಿಹಾರ ವೆಚ್ಚವನ್ನು ಆತನಿಂದ ಏಕೆ ವಸೂಲು ಮಾಡಬಾರದೆಂಬುದಕ್ಕೆ ಕಾರಣಗಳನ್ನು ಕೇಳತಕ್ಕದ್ದು. ತಪ್ಪಿತಸ್ಥ ಅಥವಾ ವಿಳಂಬ ಮಾಡಿದ ಅಧಿಕಾರಿ ಅಥವಾ ಸಿಬ್ಬಂದಿಗೆ ಕಾರಣಗಳನ್ನು ಯಾವ ಕಾಲಮಿತಿಯೊಳಗೆ ಒದಗಿಸಬೇಕೆಂಬುದನ್ನೂ ಆತನು ಸೂಚಿಸತಕ್ಕದ್ದು.

8. ಶುಲ್ಕವನ್ನು ಸಡಿಲಗೊಳಿಸುವುದು:– ಸಕ್ಷಮ ಅಧಿಕಾರಿಗೆ ಅಥವಾ ಮೇಲ್ಮನವಿ ಪ್ರಾಧಿಕಾರಕ್ಕೆ ಮೇಲ್ಮನವಿಗಾಗಿ ಯಾವುದೇ ಶುಲ್ಕವನ್ನು ವಿಧಿಸತಕ್ಕದ್ದಲ್ಲ.

